ಅಪರಂಜಿ

ಆಗಸ್ಟ್ 2005

ತಿಳಿನಗೆಯ ಕಾರಂಜಿ



ಪ್ರಕಾಶ್

ಬಾಗೂರು ಚಂದ್ರು

ರಾ. ನರಸಿಂಹಾಚಾರ್ಯ

ಶಿವು

ಡಿ. ರಮೇಶ್

ಗೋಪಾಲಿ

ಅಣ್ಣಾಸ್ವಾಮಿ ಮೊದಲಿಯಾರ್

ಆನಂದ

ಕು.ಕ.

ಎನ್. ರಾಮನಾಥ್

ಗುರು

ಪರಮೇಶ್ವರ ಪುರಾಣಿಕ

ಬಿಡಿ ಪ್ರತಿ: ರೂ. 10.00



ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 22 ಸಂಚಿಕೆ - 11

ಆಗಸ್ಟ್ - 2005

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068.



○ ಪ್ರಕಾಶ್

ಖೋಟಾ ನೋಟು ತಯಾರಿಕೆ, ಇಬ್ಬರ ಬಂಧನ

- ಸುದ್ದಿ

ಸ್ವಾವಲಂಬನೆ ಎಂದರೆ ಇದೇ!!

★★★

ರಾಜ್ಯದಲ್ಲಿ ಪುಷ್ಪೋದ್ಯಮ ಪಾರ್ಕ್: ಧರಂಸಿಂಗ್

- ಸುದ್ದಿ

ಹೊಟ್ಟೆಗೆ ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ಜುಟ್ಟಿಗೆ ಮಲ್ಲಿಗೆ ಹೂವು!!

★★★

ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ ಅಸಾಧ್ಯ

- ಹೇಳಿಕೆ

ಇದು ಆಶ್ವಾಸನೆಯೋ, ಬೆದರಿಕೆಯೋ?!

★★★

ಬೆಂಗಳೂರಿಗೆ ಜಯಲಲಿತಾ - 750 ಜತೆ ಚಪ್ಪಲಿಗಳು

- ಕೋರ್ಟ್

ಚಪ್ಪಲಿಗಳು ಬಹು ಸಂತಸ ಪಟ್ಟವಂತೆ!!

★★★

ಸಕ್ಕರೆ ಕಾರ್ಖಾನೆಗಳ ವಿರುದ್ಧ ತನಿಖೆಗೆ ಆದೇಶ

- ಸುದ್ದಿ

ಬಾಯಿ ಕಹಿಯಾಗುತ್ತಿದೆ!!

★★★

ಭ್ರಷ್ಟಾಚಾರದಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನ
- ಪತ್ರಿಕೆ

ಇದನ್ನ ಕೂಡಲೇ ಸರಿಪಡಿಸಲೇಬೇಕು!!

★★★

ಭ್ರಷ್ಟಾಚಾರಕ್ಕೆ ವಿಧಾನಸೌಧವೇ ಮೂಲ ಕಾರಣ
- ಲೋಕಾಯುಕ್ತ

ವಿಧಾನ ಸೌಧಕ್ಕೆ ಅಸಮಾಧಾನವಾಯಿತಂತೆ!!

★★★

ಸತ್ ಚಿಂತನೆಯಿಂದ ರಾಷ್ಟ್ರ ನಿರ್ಮಾಣ
- ಇನ್‌ಫೋಸಿಸ್ ಅಧ್ಯಕ್ಷ

ನಾರಾಯಣ! ನಾರಾಯಣ!!

★★★

ವಿಜಯಮಲ್ಯ ಅವರು ಅಪಾರ ಆಸ್ತಿ ಹೇಗೆ ಸಂಪಾದಿಸಿದರು?

By the sweat of his brew!!

★★★

ರಾಶಿ ಜನ್ಮಶತಮಾನೋತ್ಸವ

ಸ್ವಚ್ಛಂದ ನಗೆಗಾರ, ಹಾಸ್ಯ ಸಾಹಿತ್ಯಕ್ಕೆ ಕೊರವಂಜಿಯ ಮೂಲಕ
ಒಂದು ನೆಲೆಗಟ್ಟು ನಿರ್ಮಿಸಿದ

ದಿವಂಗತ ರಾಶಿ (ಎಂ. ಶಿವರಾಂ)
ಅವರ ಜನ್ಮ ಶತಮಾನೋತ್ಸವವನ್ನು
ಕೊರವಂಜಿ ಅಪರಂಜಿ ಟ್ರಸ್ಟ್, ಹಾಸ್ಯಬ್ರಹ್ಮ ಟ್ರಸ್ಟ್ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ

ನವೆಂಬರ್ 10, ಗುರುವಾರದಂದು
ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜನೆ ಮಾಡಿದೆ.
ಎಲ್ಲ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂಬುದು
ನಮ್ಮ ಆಶಯ. ಕಾರ್ಯಕ್ರಮದ ವಿವರಗಳು ಮುಂದಿನ ಸಂಚಿಕೆಯಲ್ಲಿ.

- ಬೇಲೂರು ರಾಮಮೂರ್ತಿ
ಉಪ ಸಂಪಾದಕರು


ನಮ್ಮನುಡಿ

ಹಾಸ್ಯ ಸಾಹಿತ್ಯವನ್ನು Serious ಆಗಿ ತಗೋಬೇಕು ಅನ್ನೋ ಉದ್ದೇಶದಿಂದ ಹಾಸ್ಯಬ್ರಹ್ಮ ಟ್ರಸ್ಟ್‌ನೊಂದಿಗೆ ಒಂದು ಅನೌಪಚಾರಿಕ ಕೂಟವನ್ನು ಏರ್ಪಡಿಸಿದ್ದೆವು. ಅಪರಂಜಿ ಶಿವು ಮತ್ತು ಅ.ರಾ. ಮಿತ್ರರವರು ಅಂದು ಹಾಸ್ಯ ಸಾಹಿತ್ಯದ ವಿವಿಧ ಆಯಾಮಗಳ ಪರಿಚಯ ಮಾಡಿಕೊಟ್ಟರು ಇಂದಿನ ಬರಹಗಾರರಿಗೆ ಇರಬೇಕಾದ ಸೂಕ್ಷ್ಮತೆಗಳ ಬಗೆಗೆ ಇಬ್ಬರೂ ಚೆನ್ನಾಗಿ ತಿಳಿ ಹೇಳಿದರು ಅಪರಂಜಿ ಶಿವು ಅವರು ಪೀಟರ್ಸ್ ಪ್ರಿನ್ಸಿಪಲ್, ಪಾರ್ಕಿನ್‌ಸನ್ ಲಾ ಮತ್ತು ಮರ್ಫಿ ಲಾ ಕುರಿತು ಮಾತಾಡಿದರೆ ಅ.ರಾ. ಮಿತ್ರರವರು ಆಸ್ಕರ್ ವೈಲ್ಡ್, ಎಡ್‌ವರ್ಡ್ ಲಿಯರ್, ರಾಬರ್ಟ್ ಲೀ, ರಿಚರ್ಡ್ ಆರ್‌ಮರ್, ಡ್ಯಾಮನ್ ರುನ್‌ಯನ್ ಮುಂತಾದ ಲೇಖಕರ ಪರಿಚಯ ಮಾಡಿಕೊಟ್ಟರು. ಒಟ್ಟಿನಲ್ಲಿ ಇದೊಂದು ಸದುದ್ದೇಶಪೂರಿತ ಪ್ರಯತ್ನವೆಂಬುದು ಎಲ್ಲರ ಅಭಿಮತವಾಗಿತ್ತು.

ವೈವಿಧ್ಯಮಯ ಬದುಕಿನ ಅನೇಕ ಮಜಲುಗಳಲ್ಲಿ ಹಾಸ್ಯವನ್ನು ಕಾಣಬಹುದು. ಸೂಕ್ಷ್ಮಗ್ರಾಹಿಕತೆ, ಭಾಷೆಯನ್ನು ಉಪಯೋಗಿಸುವ ಕಲೆಗಾರಿಕೆಯ .ಪ್ರಮುಖ ಅಂಶಗಳನ್ನು ಈ ಇಬ್ಬರೂ ಹಿರಿಯರು ಅಂದು ಭಾಗವಹಿಸಿದ ಎಲ್ಲರಿಗೂ ಮನದಟ್ಟು ಮಾಡಿಕೊಟ್ಟರು ಈ ಇಬ್ಬರೂ ಹಿರಿಯರ ಅನುಭವದ ಮಾರ್ಗದರ್ಶನ ನಿಜಕ್ಕೂ ಚೇತೋಹಾರಿಯಾಗಿತ್ತು.

ಅಪರಂಜಿ ಶಿವು ಅವರು ಎರಡೂವರೆ ತಿಂಗಳ ಕಾಲ ವಿದೇಶ ಯಾತ್ರೆ ಹೊರಟಿದ್ದಾರೆ (ಅಪರಂಜಿನ ನನ್ನ ಜವಾಬ್ದಾರಿಗೆ ವಹಿಸಿ). ಈಗಾಗಲೇ ಅವರು ಇಂಗ್ಲೆಂಡ್ ನೆಲದಲ್ಲಿ ಮಗಳ ಮನೆಯಲ್ಲಿ ಮತ್ತು ಅವರ ಇಂಗ್ಲೆಂಡ್ ಸ್ನೇಹಿತರ ನಡುವೆ ಹಾಯಾಗಿದ್ದಾರೆ. ಬರುವಾಗ ನಮಗೆಲ್ಲ ಅದ್ಭುತ ಅನುಭವಗಳ ಸರಮಾಲೆಯನ್ನೇ ತರಲಿದ್ದಾರೆ. ಅವರಿಗೆ ನಿಮ್ಮೆಲ್ಲರ ಪರವಾಗಿ ಸಂಪಾದಕ ಮಂಡಳಿ ಶುಭ ಕೋರುತ್ತದೆ.

ಬೇಲೂರು ರಾಮಮೂರ್ತಿ
ಉಪ ಸಂಪಾದಕರು



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ರಾ. ನರಸಿಂಹಾಚಾರ್ಯ ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮೂರು ಸಂಪುಟಗಳಲ್ಲಿ ಬರೆದವರು, ಬಿ.ಎಲ್. ರೈಸ್‌ರವರೊಂದಿಗೆ ಕನ್ನಡದಲ್ಲಿ ಶಾಸನ ಅಧ್ಯಯನಕ್ಕೆ ಭದ್ರ ತಳಹದಿಯನ್ನು ಹಾಕಿಕೊಟ್ಟವರು. ಪ್ರಾಕ್ತನ ವಿಮರ್ಶ ವಿಚಕ್ಷಣ ಮತ್ತು ರಾವ್ ಬಹಾದೂರ್ ಬಿರುದುಗಳನ್ನು ಪಡೆದ ನರಸಿಂಹಾಚಾರ್ಯ ಎಲ್ಲಾ ಅರ್ಥದಲ್ಲೂ ಮಹಾಮಹೋಪಾಧ್ಯಾಯ. ಇಂತಹ ಪ್ರಕಾಂಡ ವಿದ್ವಾಂಸ ನರಸಿಂಹಾಚಾರ್ಯರೇ ಕನ್ನಡದ ಮೊದಲ ಪೂರ್ಣ ಪ್ರಮಾಣದ ಹಾಸ್ಯಕೃತಿ 'ನಗೆಗಡಲು' ಬರೆದಿದ್ದಾರೆ.

ದೊಡ್ಡವರಿಗೆ ಮುಜುಗರವಾದಾಗ ಚಿಕ್ಕವರಿಗೆ ಖುಷಿಯಾಗುತ್ತದೆ. ಸಮಸ್ತ ಅಧಿಕಾರ ಹೊಂದಿರುವ ರಾಜ, ಅಪಾರ ಐಶ್ವರ್ಯ ಹೊಂದಿರುವ ಶ್ರೀಮಂತ ಅಥವಾ ಸಕಲ ವಿದ್ಯೆಗಳನ್ನು ಕಲಿತಿರುವ ವಿದ್ವಾಂಸ ತಾನೇ ಮೂರ್ಖನಾಗುವ ಅಥವಾ ಇಂತಹವರನ್ನು ತೀರಾ ಸಾಮಾನ್ಯನೊಬ್ಬ ಬೇಸ್ತು ಬೀಳಿಸುವ ಜಾನಪದ ಕತೆಗಳು ಎಲ್ಲಾ ದೇಶಗಳ ಎಲ್ಲಾ ಕಾಲಗಳ ಜನರಿಗೂ ಪ್ರಿಯವಾಗಿವೆ. ಕನ್ನಡ ತಮಿಳು ತೆಲುಗು ಮಾತನಾಡುವ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಮೂರ್ಖ ಮಠಾಧಿಪತಿ ಅವನ ದಡ್ಡ ಶಿಷ್ಯರುಗಳ ಕತೆಗಳು ಇದೇ ಗುಂಪಿಗೆ ಸೇರುತ್ತವೆ. ಇಟಲಿಯಿಂದ ಬಂದಿದ್ದ ಪಾದ್ರಿ ಬೆಸ್ಕಿ ತಮಿಳು ಭಾಷೆಯಲ್ಲಿದ್ದ ಇಂತಹ ಗುರು-ಶಿಷ್ಯರುಗಳ ಕತೆಗಳನ್ನು ಹದಿನೇಳನೆಯ ಶತಮಾನದಲ್ಲಿಯೇ ಪ್ರಕಟಿಸಿದ್ದ. ಬಿರುದುಗಳನ್ನು ಕೊಡುವುದರಲ್ಲಿ ನಿಸ್ಸೀಮರಾದ ತಮಿಳರು ಅವನನ್ನು ವೀರಮಾಮುನಿವರ್ ಎಂದು ಕರೆದರು.

ನರಸಿಂಹಾಚಾರ್ಯರ ನಗೆಗಡಲು ಒಂದು ರೀತಿಯಲ್ಲಿ ಈ ವೀರಮಾಮುನಿಯ ಕತೆಗಳ ಕನ್ನಡ ಅನುವಾದ. ಆದರೆ ನಗೆಗಡಲು ಕೇವಲ ಭಾಷಾಂತರವಲ್ಲ - ಬೇರೊಂದು ಸೃಷ್ಟಿ. ಮೂಲದಲ್ಲಿಲ್ಲದ ಕನ್ನಡನಾಡಿಗೇ ವಿಶೇಷವಾದ ಅನೇಕ ಕತೆಗಳನ್ನು ಆಚಾರ್ಯರು' ಸೇರಿಸಿದ್ದಾರೆ. ಉದಾಹರಣೆಗೆ ಪಟ್ಟ ಶಿಷ್ಯರುಗಳು ತಮ್ಮ ತಮ್ಮ ಮೂರ್ಖತನದ ಪ್ರತಾಪವನ್ನು ಕೊಚ್ಚಿಕೊಳ್ಳುವ ಮೊದಲನೆಯ ಅಧ್ಯಾಯ ಪೂರ್ಣವಾಗಿ ಆಚಾರ್ಯರ ಸೃಜನಶೀಲತೆಯ ಫಲ. ಹಾಗೆಯೇ '(ಹೊಳೆ) ನಂಜುಳ್ಳ ಹಾವಿನಂತೆ ಬುಸ್ಸೆಂದು ಕೂಗಿ ರೇಗಿ ಹೊಗೆಯಾಗಿ ಕುದಿದು ಎದ್ದು ಹಾರಿ (ಬಂದಿತು)' ಎನ್ನುವ ಮಡ್ಡಿಯ ವರ್ಣನೆ 'ದ್ರೋಹಿಯೇ! ಹೆಬ್ಬುಲಿಯೇ! ಹೆಮ್ಮಾರಿಯೇ! ಡಾಕಿನಿಯೇ! ನೀನು ಹೆಣ್ಣೊಡನೆ ಯಾದರೂ ಗಂಡೊಡನೆಯಾದರೂ ಹುಟ್ಟಲಿಲ್ಲವೇ?' ಎನ್ನುವಂತಹ ಒಂದೂವರೆ ಪುಟಗಳ ಸಜ್ಜನ ಬೈಗುಳಗಳು ಮೂಲ ತಮಿಳಿನಲ್ಲಿ ಇರಲಾರದು.

ನಗೆಗಡಲು ಪ್ರಕಟವಾದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ. ಮುಂದೆ 79-80 ವರ್ಷಗಳ ನಂತರ ಈ ಗುರು-ಶಿಷ್ಯರುಗಳನ್ನು ದಾಶರಥಿ ದೀಕ್ಷಿತ್ ಇಂಗ್ಲೆಂಡಿಗೂ ಕರೆದುಕೊಂಡು ಹೋದರು.

ಇಲ್ಲಿರುವ 'ಹೊಳೆಯನ್ನು ದಾಟಿದುದು' ನಗೆಗಡಲಿನ ಎರಡನೆಯ ಪ್ರಕರಣ.

ಹೊಳೆಯನ್ನು ದಾಟಿದುದು

– ರಾ. ನರಸಿಂಹಾಚಾರ್ಯ

ಗಾಂಪರೊಡೆಯರು ಅಡಿಗಡಿಗೆ ಪಂಚ ಶಿಷ್ಯರನ್ನು ಸಂಗಡ ಕರೆದುಕೊಂಡು ಉಳಿದ ಶಿಷ್ಯರನ್ನು ವಿಚಾರಿಸುವುದಕ್ಕೆ ಹೋಗುವ ವಾಡಿಕೆಯುಂಟು. ಅದೇ ಮೇರೆಗೆ ಒಂದು ದಿವಸ ಅವರು ಬೆಳಗ್ಗೆ ಎದ್ದು ಶಿಷ್ಯರೊಡನೆ ಸುತ್ತಮುತ್ತ ಇರುವ ಹಳ್ಳಿಗಳಿಗೆ ಕಾಲುನಡೆಯಾಗಿ ಪಯಣ ಮಾಡ ಹೋದರು. ತಿರುಗಿ ಬರುವಾಗ ದಾರಿಯ ನಡುವೆ ಇರುವ ಒಂದು ಹೊಳೆಯ ತಡಿಯಲ್ಲಿ ಮೂರನೆಯ ಜಾವಕ್ಕೆ ಸರಿಯಾಗಿ ಬಂದು ಸೇರಿ, ಹೊಳೆಯನ್ನು ನೋಡಿ, ಇಳಿವುದಕ್ಕೆ ಹೆದರಿ, 'ಈ ಹೊಳೆ ಮೋಸದ ಬೆಳೆ; ಬಹಳ ವಂಚನೆಯುಳ್ಳುದು; ಆದುದರಿಂದ ಇದು ಎಚ್ಚರವಾಗಿರುವಾಗ ಇದನ್ನು ದಾಟಿ ಹೋಗಕೂಡದು' ಎಂದು ಹೇಳಿ, ಗುರುಗಳು 'ಹೊಳೆ ಮಲಗಿದೆಯೋ ಎಚ್ಚರವಾಗಿದೆಯೇ ಪರಿಕ್ಷಿಸಿ ನೋಡು' ಎಂದು ಮಡ್ಡಿಗೆ ಬೆಸಸಿದರು. ಅವನು ಗುರುಗಳ ಅಪ್ಪಣೆಯನ್ನು ತಲೆಯಮೇಲೆ ತಳೆದು, ಆಗ ಹೊಗೆಯ ಬತ್ತಿಯನ್ನು ಹೊತ್ತಿಸುವುದಕ್ಕೆ ತನ್ನ ಕೈಯಲ್ಲಿ ಇಟ್ಟುಕೊಂಡಿದ್ದ ಕೊಳ್ಳಿಯನ್ನು ತೆಗೆದುಕೊಂಡು ಹೋಗಿ ತಾನು ಹೊಳೆಯಲ್ಲಿಳಿಯದೆ ಹಿಂದಕ್ಕೆ ನಿಂತುಕೊಂಡು ಕೈಯನ್ನು ನೀಡಿ ಕೊಳ್ಳಿಯ ತುದಿಯನ್ನು ತಣ್ಣೀರಿನಲ್ಲಿ ನೆನೆಯಿಸಿದ ಕೂಡಲೆ ನೀರು ಬುಸ್ಸೆಂದು ಹೊಗೆಯಾದುದನ್ನು ಕಂಡು, ಎದೆನಡುಗಿ ಕಾಲುಜಾರಿ ಕೆಳಗೆ ಬಿದ್ದು ಕಳವಳಿಸಿ ಒದೆದುಕೊಂಡು ಮೆಲ್ಲಗೆ ಎದ್ದು ನಡುಗಿ ಬೆಚ್ಚಿ ಬಾಯಾರಿ ಬಸವಳಿದು ಹಲುಬಿಕೊಂಡು ಅಳುತ್ತ ಓಡಿಬಂದು, 'ಅಯ್ಯಾ! ಅಯ್ಯಾ! ಹೊಳೆಯನ್ನು ದಾಟುವುದಕ್ಕೆ ಇದು ವೇಳೆಯಲ್ಲ. ಅದು ಎಚ್ಚರವಾಗಿದೆ. ನಾನು ಮುಟ್ಟಿದ ಕೂಡಲೆ ನಂಜುಳ್ಳ ಹಾವಿನಂತೆ ಬುಸ್ಸೆಂದು ಕೂಗಿ ರೇಗಿ ಹೊಗೆಯಾಗಿ ಕುದಿದು ಎದ್ದು ಹಾರಿ ನನ್ನನ್ನು ಕೊಲ್ಲುವುದಕ್ಕೆ ಬಂದಿತು. ಅದರ ಉರವಣೆಗೆ ಗುರಿಯಾಗದೆ ತಮ್ಮ ಪರಮಕೃಪೆಯಿಂದಲೂ ನನ್ನ ತಾಯಿ ಮಾಡಿದ ಪುಣ್ಯದಿಂದಲೂ ತಪ್ಪಿ, ನಾನು ಬದುಕಿ ಮರಳಿ ಬಂದುದು ಬಹಳ ಆಶ್ಚರ್ಯವೇ ಸರಿ' ಎಂದನು. ಅದನ್ನು ಕೇಳಿ ಗುರುಗಳು ಬೆಚ್ಚಿ ಮೂರ್ಛೆಹೋಗಿ ಸ್ವಲ್ಪ ಹೊತ್ತಿನ ಮೇಲೆ ತಿಳಿದು, 'ಅಪ್ಪಾ! ಹಣೆಬರೆಹವನ್ನು ಯಾರರಿಯಬಲ್ಲರು! ಆ ಹೊಳೆ ಮಲಗುವವರೆಗೂ ಸ್ವಲ್ಪ ಹೊತ್ತು ಕಾದಿರುವ' ಎಂದು ಹೇಳಿ, ಅವರೂ ಶಿಷ್ಯರೂ ಹೊಳೆಯ ಬದಿಯಲ್ಲಿ ಗಿಡಗಳ ನೆಳಲಿನಿಂದ ಕತ್ತಲೆಯಾಗಿದ್ದ ಒಂದು ಹೂದೋಟದೊಳಗೆ ಮರೆಯಾಗಿ ತಂಗಿದ್ದರು. ಅಲ್ಲಿ ಹೊತ್ತು ಹೋಗುವಂತೆ ಆ ಹೊಳೆಯ ಸಂಬಂಧವಾದ ವಿಶೇಷ ಸಂಗತಿಗಳನ್ನು ಕುರಿತು ಒಬ್ಬೊಬ್ಬನೂ ಅವನವನಿಗೆ ತಿಳಿದುದನ್ನು ಹೇಳುತ್ತ ಬರುವಾಗ ಮಡೆಯನೆಂಬ ಶಿಷ್ಯನು-

''ಸ್ವಾಮೀ! ಈ ಹೊಳೆಯ ತಂತ್ರ, ಮೋಸ, ಕ್ರೂರಸ್ವಭಾವ ಇವುಗಳನ್ನು ಕುರಿತು ನನ್ನ ಅಜ್ಜಂದಿರು ಹಲವುಬಾರಿ ಮಾತನಾಡಿರುವುದನ್ನು ನಾನು ಚೆನ್ನಾಗಿ ಕೇಳಿದ್ದೇನೆ. ನನ್ನ ಅಜ್ಜಂದಿರು ದೊಡ್ಡ ವರ್ತಕರು. ಅವರು ಒಂದು ದಿನ ಉಪ್ಪಿನ ಚೀಲಗಳನ್ನು ಹೇರಿದ ಕತ್ತೆಗಳನ್ನು ತಾವೂ ತಮ್ಮ ಜತೆಗಾರರೂ ಕೂಡಿ ಹೊಡೆದುಕೊಂಡು ನಡುಹೊಳೆಯಲ್ಲಿ

ಇಳಿದು ಬರುವಾಗ, ಬೇಸಗೆಯ ಕಾಲವಾಗಿದ್ದುದರಿಂದ ಬೇಗೆಯಡಗುವ ಹಾಗೆ ಸೊಂಟದವರೆಗೂ ಹರಿವ ತಣ್ಣೀರಿನಲ್ಲಿ ತಾವೂ ಮುಳುಗಿ ಕತ್ತೆಗಳನ್ನು ನಿಲ್ಲಿಸಿ ತೊಳೆದರು. ತರುವಾಯ ಆಚೆಯ ತಡಿಗೆ ಹೋಗಿ ನೋಡಿದಾಗ, ಸೂಜಿಯಿಂದ ಒತ್ತಾಗಿಯೂ ಬಿಗಿಯಾಗಿಯೂ ಸಂದಿಲ್ಲದೆ ಹೊಲಿದಿದ್ದ ಗೋಣಿಯ ಚೀಲದ ಬಾಯಿ ರವೆಯಷ್ಟೂ ತೆರೆಯದೆ ಇದ್ದರೂ ಅದರೊಳಗಿದ್ದ ಉಪ್ಪನ್ನೆಲ್ಲಾ ಹೊಳೆ 'ಸಿಪ್ಪೆಯಿದ್ದಂತೆಯೇ ತಿರುಳನ್ನು ತಿಂದಹಾಗೆ' ಉಪಾಯವಾಗಿ ಕದ್ದು ತಿಂದುಬಿಟ್ಟಿದ್ದುದನ್ನು ಕಂಡು, 'ಅಯ್ಯೊ ಅಯ್ಯೊ! ಈ ಹೊಳೆ ಉಪ್ಪನ್ನು ಕೊಳ್ಳೆಹೊಡೆದು ತಿಂದ ಮತ್ತಿನಿಂದಲೇ ನಮ್ಮನ್ನು ನುಂಗದೆ ಬಿಟ್ಟುಬಿಟ್ಟಿತು. ಉಪ್ಪು ಹೋದರೆ ಹೋಗಲಿ; ಇಷ್ಟುಮಟ್ಟಿಗೆ ನಮಗೆ ಒಳ್ಳೆಯ ಸಹಾಯವನ್ನು ಮಾಡಿ ಉಸಿರೊಂದಿಗೆ ಬಿಟ್ಟಿತಲ್ಲವೆ! ಇದೇ ದೊಡ್ಡ ಉಪಕಾರ' ಎಂದೆಣಿಸಿ ಅವರು ಸಂತಸಗೊಂಡರು' ಎಂದು ಹೇಳಿದನು.

ಹೀಗೆಯೇ ಮಾತನಾಡಿಕೊಂಡಿದ್ದಾಗ, ಅವರು ಅಲ್ಲಿ ಒಬ್ಬನು ಕುದುರೆಯೇರಿಕೊಂಡು ಬರುವುದನ್ನು ಕಂಡರು. ಹೊಳೆಯಲ್ಲಿ ಮಂಡಿಯುದ್ದ ನೀರು ಹರಿದುಬರುತ್ತಿದ್ದರೂ ಸ್ವಲ್ಪವೂ ಅಂಜಿಕೆಯಿಲ್ಲದೆ ಅವನು ಕುದುರೆಯ ಮೇಲೆ ಇದ್ದಂತೆಯೇ ಹಿಂದೆಗೆಯದೆ ಸರಸರ ಎಂದು ಬೇಗನೆ ಬಂದನು. ಅದನ್ನು ನೋಡಿ, ಇವನು 'ಆಹಾ! ನಮ್ಮ ಗುರುಗಳಿಗೂ ಕುದುರೆಯಿದ್ದಿದ್ದರೆ ಅವರೂ ಅವರನ್ನು ಸೇರಿದ ನಾವೂ ಅಂಜಿಕೆಯಿಲ್ಲದೆ ಹೊಳೆಯಲ್ಲಿ ಇಳಿಯಬಹುದಾಗಿದ್ದಿತಲ್ಲಾ! ಕುದುರೆ ಇಲ್ಲದುದರಿಂದಲೇ ಹೀಗೆ ಕಳವಳಿಸಿಕೊಂಡಿರಬೇಕಾಗಿ ಬಂದಿತು. ಇನ್ನು ಹೇಗಾದರೂ ಒಂದು ಕುದುರೆಯನ್ನು ಕೊಂಡುಕೊಳ್ಳಬೇಕು' ಎಂದು ತಮ್ಮೊಳಗೆ ನಿಶ್ಚಯಿಸಿಕೊಂಡು ಗುರುಗಳಲ್ಲಿ ಬಿನ್ನವಿಸಿದರು. ಅವರು 'ಈ ವಿಷಯವನ್ನು ಕುರಿತು ಮುಂದೆ ಮಾತನಾಡುವ' ಎಂದು ಹೇಳಿ, 'ಈಗ ಹೊತ್ತು ಮುಳುಗುವ ವೇಳೆಯಾಯಿತು. ಮಠಕ್ಕೆ ಹೋಗಬೇಕು. ಆದುದರಿಂದ ಹೊಳೆ ಮಲಗಿದೆಯೇ ನೋಡಿ' ಎಂದು ಶಿಷ್ಯರಿಗೆ ಬೆಸಸಿದರು.

ಅದೇ ಮೇರೆಗೆ ಮಡ್ಡಿ ಕೊಳ್ಳಿಯನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ನೆನೆಯಿಸಿ ಪರೀಕ್ಷಿಸಲು, ಆ ಕೊಳ್ಳಿಯಲ್ಲಿದ್ದ ಬೆಂಕಿ ಆಗಲೇ ಆರಿ ಹೋಗಿದ್ದುದರಿಂದ ಹೊಳೆಯಲ್ಲಿ ಸ್ವಲ್ಪವೂ ಹೊಗೆಯೇಳದೆ ಇದ್ದುದನ್ನು ಕಂಡು ಅವನು ಬಹಳ ಸಂತಸಗೊಂಡು ಓಡಿಬಂದು 'ಇದೇ ಒಳ್ಳೆಯ ವೇಳೆ! ಇಂತಹ ವೇಳೆ ಇನ್ನು ಸಿಕ್ಕಲಾರದು. ಬಾಯನ್ನು ತೆರೆಯದೆ, ಸದ್ದುಮಾಡದೆ ತಟ್ಟನೆ ಎದ್ದು ಬನ್ನಿ! ಬನ್ನಿ! ಹೊಳೆಗೆ ಒಳ್ಳೆಯ ನಿದ್ರೆಯ ವೇಳೆಯಾಗಿದೆ. ಈಗ ಎಳ್ಳಷ್ಟೂ ಅಂಜಬೇಕಾದುದಿಲ್ಲ. ತಡವು ಮಾಡಬೇಡಿ, ಓಳಿ!' ಎಂದನು. ಮಡ್ಡಿ ಹೇಳಿದ ಇಂಪಾದ ಮಾತನ್ನು ಕೇಳಿ ಎಲ್ಲರೂ ತಟ್ಟನೆ ಎದ್ದು, ಕಿಮಕಮ ಎನ್ನದಂತೆ ಜೋಕೆಯಾಗಿ ಒಬ್ಬರನ್ನೊಬ್ಬರು ಬಿಗಿದು ತಬ್ಬಿಕೊಂಡು ಹೊಳೆಯಲ್ಲಿಳಿದು, ರವೆಯಷ್ಟೂ ಸದ್ದಾಗದಂತೆ ಮೆಲ್ಲಗೆ ಕಾಲೆತ್ತಿ ಒಂದೊಂದಡಿಯಾಗಿ ನೀರಿನಲ್ಲಿಟ್ಟು ಅಮುಕಿ ತರುವಾಗ ಮೆಲ್ಲಗೆ ಮೇಲಕ್ಕೆತ್ತಿ, ಎದೆಯನ್ನು ಅಡಿಗಡಿಗೆ ಮುಟ್ಟಿ ನೋಡಿಕೊಂಡು ತಲ್ಲಣಿಸುತ್ತ ಹೊಳೆಯನ್ನು ದಾಟಿ ತಡಿಗೆ ಏರಿದರು.

ತಡಿಯೇರಿದ ಕೂಡಲೇ ಅವರು ಹಿಂದೆ ಪಟ್ಟ ಕಷ್ಟವನ್ನೆಲ್ಲಾ ಮರೆತು ಸಂತಸದಿಂದ ಉಕ್ಕಿ ಸೊಕ್ಕಿ ತಲೆ ಕಾಲು ತಿಳಿಯದೆ ನೆಗೆದು ಕುಣಿದಾಡಿಕೊಂಡಿರಲು, ಮುಟ್ಠಾಳನು ಸ್ವಲ್ಪ

ಪೊತ್ತು ಆಲೋಚಿಸಿ, 'ನಾವೆಲ್ಲರೂ ಸುಖವಾಗಿ ಬಂದು ಸೇರಿದೆವೋ? ಎಣಿಸಿ ನೋಡುವ' ಎಂದು ತನ್ನನ್ನು ಸೇರಿಸಿಕೊಳ್ಳದೆ ಉಳಿದವರನ್ನು ಮಾತ್ರ ಲೆಕ್ಕ ಮಾಡಿದನು. ಆಗ ಐವರಿರುವುದನ್ನು ಕಂಡು, 'ಅಪ್ಪಪ್ಪಾ! ಅಯ್ಯಯ್ಯೋ! ಇದೇನು ಕೇಡು? ಇದೇನು ಗ್ರಹಚಾರ? ಒಬ್ಬನು ಹೊಳೆಯಲ್ಲಿಯೇ ಹೋಗಿಬಿಟ್ಟನು; ಐವರು ಮಾತ್ರ ಇದ್ದೇವೆ' ಎಂದು ಗುರುಗಳನ್ನು ನೋಡಿ ನಿಟ್ಟುಸಿರು ಬಿಟ್ಟು, ಎದೆಯನ್ನು ಬಡಿದುಕೊಳ್ಳುತ್ತಾ ಗೊಳೋ ಎಂದು ಅತ್ತನು. ಗುರುಗಳು ಅವನನ್ನು ಅಳಬೇಡ ಎಂದು ಸಂತೈಸಿ, ಎಲ್ಲರನ್ನೂ ವರಿಸೆಯಾಗಿ ನಿಲ್ಲಿಸಿ, ಒಂದುಸಾರಿ ಎರಡುಸಾರಿ ಮೂರುಸಾರಿ ಅವರವರನ್ನು ಬೇರೆ ಬೇರೆ ತಮ್ಮ ಬೆರಳನ್ನು ನೀಡಿ ನೀಡಿ ತೋರಿಸಿ ತೋರಿಸಿ ತಾವೇ ಎಣಿಸಿ ಲೆಕ್ಕ ಮಾಡಿ ನೋಡಿದರು. ಹಾಗೆ ಎಣಿಸುವಾಗಲೆಲ್ಲಾ ಅವರು ತಮ್ಮನ್ನು ಬಿಟ್ಟು ಲೆಕ್ಕಮಾಡಿ 'ಅಹುದಪ್ಪಾ ನೀನು ಹೇಳಿದಂತೆ ಐದುಮಂದಿ ಮಾತ್ರ ಇದ್ದೇವೆ' ಎಂದು ಹೇಳಿ ತಾವೂ ಕಳವಳಿಸುತ್ತ ನಿಂತುಕೊಂಡರು. ಹಾಗೆಯೇ ಒಬ್ಬೊಬ್ಬನೂ ತನ್ನನ್ನು ಬಿಟ್ಟು ಉಳಿದವರನ್ನು ಮಾತ್ರ ಎಣಿಸಿ ಎಣಿಸಿ ಆರನೆಯವನನ್ನು ಕಾಣದೆ ಹೋದುದರಿಂದ ಅರುವರಲ್ಲಿ ಒಬ್ಬನನ್ನು ಸಂದೇಹವಿಲ್ಲದೆ ಹೊಳೆ ನುಂಗಿಬಿಟ್ಟಿತೆಂದು ಅವರು ತಮ್ಮೊಳಗೆ ನಿಶ್ಚಯಿಸಿಕೊಂಡರು. ಅದರ ಮೇಲೆ ಶಿಷ್ಯರು ಗಟ್ಟಿಯಾಗಿ ಅಳುತ್ತಾ ಕುಯ್ಯೋ! ಮೊರೆಯೋ! ಎಂದು ಕೂಗಿಕೊಂಡು, ನದಿಯನ್ನು ನೋಡಿ ಕಣ್ಣೀರನ್ನು ಪಳಪಳ ಎಂದು ಸುರಿಸುತ್ತ, 'ಅಯ್ಯೋ! ಪಾಪಿಯಾದ ಹೊಳೆಯೇ! ಪರಮ ಚಂಡಾಲ ನದಿಯೆ! ದ್ರೋಹಿಯೇ! ಹೆಬ್ಬುಲಿಯೇ! ಹೆಮ್ಮಾರಿಯೇ! ಡಾಕಿನಿಯೇ! ಜಗವೆಲ್ಲಾ ಅಡಿಗೆರಗಿ ಹೊಗಳುವಂತೆ ತಪವೆಲ್ಲಾ ಸೇರಿ ಒಂದು ರೂಪಾಂತ ಹಾಗೆ ಎಸೆವ ಮಹಾತ್ಮರಾದ ನಮ್ಮ ಗುರುಗಳ ಮುಖ್ಯ ಶಿಷ್ಯನನ್ನು ರೆಪ್ಪೆಮುಚ್ಚಿ ತೆರೆವಷ್ಟರೊಳಗೆ ಅನ್ಯಾಯವಾಗಿ ಕೊಳ್ಳೆ ಹೊಡದೆಯಲ್ಲಾ! ಎಳ್ಳಷ್ಟಾದರೂ ದಯೆಯಿಲ್ಲದೆ ಗೆಳಸಿನಂತೆ ನುಂಗಿಬಿಟ್ಟೆಯಲ್ಲಾ! ಅಂಜಿಕೆಯೆಂಬುದು ತುಸುವೂ ಇಲ್ಲದೆ ಬಾಳೆಯ ಹಣ್ಣಿನಂತೆ ತಿಂದು ತೇಗಿದೆಯಲ್ಲಾ! ನಿನ್ನ ಮನವು ಕರಗದ ಕಬ್ಬಿಣವೋ? ಕಲ್ಲೋ? ನೀನು ಹೆಣ್ಣೊಡನಾದರೂ ಗಂಡೊಡನಾದರೂ ಹುಟ್ಟಲಿಲ್ಲವೋ? ನೀತಿಯಿಲ್ಲದ ನೀಚ ನದಿಯೇ! ನೀನು ಲೋಕದಲ್ಲಿ ನೆಲೆಯಾಗಿರುವೆಯಾ? ಆಗಸದವರೆಗೂ ತೆರೆಗಳನ್ನು ಹಾರಿಸುವೆಯಾ? ಕಡಲಂತೆ ಮೊಳಗಿ ಕರೆಗಣ್ಮುವೆಯಾ? ಇನ್ನು ನೀನು ನೀರು ಬತ್ತಿ, ಚಿಲುಮೆಗಳಡಗಿ ಹಳ್ಳಗಳು ಹೂತುಹೋಗಿ ಪ್ರವಾಹವಿಲ್ಲದೆ, ಮನನೊಂದು ರೂಪುತೋರದೆ ನಿರ್ನಾಮವಾಗಿ ಹಾಳಾಗಿಹೋಗುವೆ' ಎಂದು ಹೊಳೆಯನ್ನು ಶಪಿಸಿ ಮತ್ತೆ ಹುಚ್ಚು ಹಿಡಿದಂತೆ ಮನಬಂದ ಹಾಗೆ ಬೈದುಕೊಂಡಿದ್ದರು. ಅದುವರೆಗೂ ತಮ್ಮೊಳಗೆ ಇಂಥವನು ಹೊಳೆಗೆ ಬಲಿಯಾದನು ಎಂಬುದನ್ನು ಒಬ್ಬನಾದರೂ ತಿಳಿಯಲಿಲ್ಲ; ಅವನು ಯಾರು ಎಂದು ವಿಚಾರಿಸಲೂ ಇಲ್ಲ.

ಆ ವೇಳೆಗೆ ಸರಿಯಾಗಿ ತಿಳುವಳಿಕೆಯುಳ್ಳ ದಾರಿಗನೊಬ್ಬನು ಆಯೆಡೆಗೆ ಬಂದು ಇವರು ತಲ್ಲಣಿಸುವುದನ್ನು ನೋಡಿ 'ಏಕಯ್ಯ ತಲ್ಲಣಿಸುತ್ತೀರಿ? ನಿಮಗೇನು ಕೇಡುಂಟಾಯಿತು? ಹೇಳಿ' ಎಂದು ಕೇಳಲು, ಅವರು ನಡೆದ ಸಂಗತಿಯನ್ನು ಬಿತ್ತರಿಸಿದ ಮೇಲೆ ಅವನು ಇವರ ಬೆಳ್ಳನವನ್ನು ತಿಳಿದುಕೊಂಡು 'ಅಪ್ಪಪ್ಪಾ! ಅಮ್ಮಮ್ಮಾ! ಇದು ಬಹಳ ಕಷ್ಟವಾದ ಕೆಲಸ, ನನ್ನಿಂದಲ್ಲದೆ ಬೇರೊಬ್ಬರಿಂದ ಆಗಲಾರದು. ನಾನು ಮಂತ್ರವಿದ್ಯೆಯಲ್ಲಿ

ಬಹಳ ಚತುರನು. ನನಗೆ ಯಕ್ಷಿಣಿ ಮೋಹಿನಿ ಮೊದಲಾದುವೆಲ್ಲಾ ವಶವಾಗಿವೆ; ಅವು ನಾನು ಹೇಳಿದಂತೆ ಕುಣಿಯುತ್ತವೆ. ನನಗೆ ನೀವು ಒಳ್ಳೆಯ ಬಹುಮಾನವನ್ನು ಕೊಟ್ಟು ಮನ್ನಣೆ ಮಾಡುವುದಾದರೆ, ಹೊಳೆಯಲ್ಲಿ ಹೋದವನನ್ನು ನಿಮಿಷ ಮಾತ್ರದಲ್ಲಿ ಇಲ್ಲಿಗೆ ಕರೆಯಿಸುತ್ತೇನೆ; ಆಗ ನನ್ನ ಬಲ್ಲತನವನ್ನು ನೋಡುವಿರಿ' ಎಂದನು - ಅವನ ಮಾತಿಗೆ ಗುರುಗಳು ಮೆಚ್ಚಿ ತಲೆಯನ್ನು ತೂಗಿ ಬಹಳ ಸಂತಸಗೊಂಡು 'ಅಯ್ಯಾ! ನಾವು ದಿಕ್ಕಿಲ್ಲದೆ ಕಳವಳಿಸುವಾಗ, ಮಾರಾಯ ನೀನು ನಮ್ಮ ಕುಲದೈವದಂತೆ ಎಲ್ಲಿಂದ ಬಂದೆಯೋ ತಿಳಿಯದು. ನೀನು ಈಗ ಮಾಡುವುದಾಗಿ ಒಪ್ಪಿಕೊಂಡ ದೊಡ್ಡ ಉಪಕಾರಕ್ಕೆ ಪ್ರತಿಯಾಗಿ ಬಡವರಾದ ನಾವು ನಿನಗೇನು ಮಾಡಬಲ್ಲೆವು? ನಿನಗೆ ಬಹಳ ಪುಣ್ಯ ಬರುತ್ತದೆ. ಹೇಗಾದರು ದೊಡ್ಡ ಮನಸ್ಸು ಮಾಡಿ ಕಾಣದೆ ಮಾಯವಾಗಿ ಹೋಗಿರುವವನನ್ನು ಕರೆಯಿಸಿಕೊಟ್ಟರೆ ಮುಯ್ಯಿಲ್ಲದ ಉಪಕಾರವಾಗುತ್ತದೆ. ನಮ್ಮ ದಾರಿಯ ವೆಚ್ಚಕ್ಕಾಗಿ ನಾಲ್ವತ್ತೈದು ಹಣವನ್ನು ಇದೋ! ಈ ಹರಕು ಬಟ್ಟೆಯ ಸೆರಗಿನಲ್ಲಿ ಗಂಟುಹಾಕಿ ಇಟ್ಟುಕೊಂಡಿದ್ದೇವೆ. ಅದನ್ನು ಬೇಕಾದರೆ ನಿನ್ನ ಕೈಯಲ್ಲಿ ಕೊಟ್ಟುಬಿಡುತ್ತೇವೆ. ಕರುಣಿಸಬೇಕು' ಎಂದನು.

ಅದಕ್ಕೆ ಮಂತ್ರವಾದಿ 'ಹಾಗೆಯೇ ಆಗಲಿ' ಎಂದು ಒಪ್ಪಿಕೊಂಡು, ಕಬ್ಬಿಣದ ಕಟ್ಟುಗಳನ್ನು ಹಾಕಿ ಒನಕೆಯ ಹಾಗೆ ದಪ್ಪವಾಗಿಯೂ ಉದ್ದವಾಗಿಯೂ ಇರುವ ತನ್ನ ಕೈಯ ದೊಣ್ಣೆಯನ್ನು ಅವರಿಗೆ ತೋರಿಸಿ 'ನಾನು ಹೇಳಿದ ಮಂತ್ರವಿದ್ಯೆ ಇದರಲ್ಲಿಯೇ ಇದೆ. ನೀವು ವರಿಸೆಯಾಗಿ ನಿಂತು, ಮೊಗದಲ್ಲಿ ಸಿಟ್ಟುದೋರದೆ ಸಂತೋಷವಾಗಿ, ದೇವರಿಗೆ ಹರೆಯನ್ನು ಸಲ್ಲಿಸುವಂತೆ ಕೈ ಮುಗಿದುಕೊಂಡು ಬಾಗಿ, ಈ ದೊಣ್ಣೆಯಿಂದ ಬೆನ್ನಿನ ಮೇಲೆ ಆಳಿಗೆ ಒಂದೇಟನ್ನು ತಿಂದು, ಕೂಡಲೆ ಅವನವನು ತನ್ನ ತನ್ನ ಹೆಸರನ್ನು ಹೇಳಿ ಎಣಿಸಿಕೊಂಡು ಬಂದರೆ, ಆರುಮಂದಿಯೂ ಈಯೆಡೆಯಲ್ಲಿ ಈಗಲೇ ಕಣ್ಣೆದಿರಿಗೆ ಬಂದು ನಿಲ್ಲುವ ಹಾಗೆ ಮಾಡುವೆನು' ಎಂದನು. ಅವರು 'ಒಳ್ಳೆಯದು' ಎಂದು ಒಪ್ಪಿದರು.

ಬಳಿಕ ಮಂತ್ರವಾದಿ ಅವರನ್ನು ವರಿಸೆಯಾಗಿ ನಿಲ್ಲಿಸಿ, ಆ ದೊಣ್ಣೆಯನ್ನು ಮೇಲಕ್ಕೆತ್ತಿ ಮೊದಲು ಗುರುಗಳ ನಡುಬೆನ್ನನ್ನು ನೋಡಿ ಬಲವಾಗಿ ಒಂದೇಟನ್ನು ಹಾಕಿದನು. ಅವರು 'ಅಯ್ಯಪ್ಪ! ಸಾಕು! ನಾನೇ ಗಾಂಪರೊಡೆಯ' ಎಂದರು. ಹೀಗೆಯೇ ಎಲ್ಲರಿಗೂ ಒಂದೊಂದೇಟನ್ನು ಹಾಕಲು, ಅವರಲ್ಲಿ ಒಬ್ಬನು 'ನಾನು ಮರುಳ' ಎಂದೂ ಇನ್ನೊಬ್ಬನು 'ನಾನು ಮಂಕ' ಎಂದೂ, ಮತ್ತೊಬ್ಬನು 'ನಾನು ಮುಟ್ಠಾಳ' ಎಂದೂ, ಮಗದೊಬ್ಬನು 'ನಾನು ಮಡೆಯ' ಎಂದೂ, ಉಳಿದವನು 'ನಾನು ಮಡ್ಡಿ' ಎಂದೂ ಬೇರೆ ಬೇರೆ ತಮ್ಮ ತಮ್ಮ ಹೆಸರುಗಳನ್ನು ಹೇಳಿದಾಗ, ಇವನು ಲೆಕ್ಕಮಾಡಲು, ಆಗ ಆರು ಮಂದಿಯಲ್ಲಿ ಒಬ್ಬನೂ ಕಡಿಮೆಯಾಗದೆ ಇದ್ದುದನ್ನು ಕಂಡು, ಅಚ್ಚರಿಗೊಂಡು, ಆ ಆರುವರೂ ಮಂತ್ರವಾದಿಯಾದ ದಾರಿಗನ ಬಲ್ಲತನವನ್ನು ಮೆಚ್ಚಿ ಕೊಂಡಾಡಿ, ತಾವು ಹಿಂದೆ ಹೇಳಿದಂತೆ ಅವನಿಗೆ ಹಣವನ್ನು ಗಂಟಿನಿಂದ ಬಿಚ್ಚಿ ಕೊಟ್ಟುಬಿಟ್ಟು, ಅವನನ್ನು ಹೊಗಳುತ್ತಾ ಮುಂದೆ ಪಯಣ ಮಾಡಿದರು.

★★★

ಬಾಬ್ ಹೋಪ್

– ಶಿವು

ಬಾಬ್ ಹೋಪ್ ಯಾರಿಗೆ ಗೊತ್ತಿಲ್ಲ? ಬಿಂಗ್ ಕ್ರಾಸ್‌ಬಿ ಜೊತೆ ಈತ ನಟಿಸಿದ ''ರೋಡ್ ಟು ಹಾಂಗ್‌ಕಾಂಗ್'' ಐವತ್ತರ ದಶಕದಲ್ಲಿ ನಾವೆಲ್ಲ ನೋಡಿ ಆನಂದಿಸಿದ ಅತಿ ತಮಾಷೆ ಚಿತ್ರ. ಬಾಬ್ ಹೋಪ್ ಅಂದ ತಕ್ಷಣ ಅವನ ಸುಪ್ರಸಿದ್ಧ ಮೂಗು ಜ್ಞಾಪಕಕ್ಕೆ ಬರುತ್ತೆ. ಅಗಲವಾಗಿದ್ದು, ತೀರಾ ಮುಂದಕ್ಕೆ ಚಾಚಿದ್ದ ಈ ''ಮಗಚು ಕೈ ಮೂಗು'' ಬಾಬ್‌ಗೆ "Old Ski Snoot" ಅನ್ನುವ ಅಡ್ಡ ಹೆಸರನ್ನು ಗಳಿಸಿಕೊಟ್ಟಿತ್ತು.

ಬಾಬ್ ಹೋಪ್ ಹುಟ್ಟಿದ್ದು ಇಂಗ್ಲೆಂಡಿನಲ್ಲಿ. ಹುಟ್ಟಿದ ಹೆಸರು ಲೆಸ್ಲಿ ಟಾನ್ಸ್ ಹೋಪ್. 1907 ರಲ್ಲಿ ಬಾಬ್ ನಾಲ್ಕು ವರ್ಷದವನಿದ್ದಾಗ ಅವನ ತಂದೆ ತಾಯಿ ಅಮೆರಿಕದ ಕ್ಲೀವ್‌ಲೆಂಡ್‌ಗೆ ವಲಸೆ ಹೋದರು. ಬಡತನದಲ್ಲಿ ಬೆಳೆದು ಬಂದ ಬಾಬ್ ಅಮೆರಿಕದ ಸುಪ್ರಸಿದ್ಧ ಹಾಸ್ಯ ನಟ. ನಗೆಗಾರರಾಗಿದ್ದು ಒಂದು ಅದ್ಭುತ ಯಶಸ್ಸಿನ ಕಥೆ.

ತನ್ನ ಹಾಸ್ಯ ಪ್ರಜ್ಞೆಯನ್ನು ಅನುಭವದ ಒರೆಗಲ್ಲಿನಲ್ಲಿ ತೀಡಿ, ಸಾರ್ವಜನಿಕರಿಗೆ ತೋರಲು ಬಾಬ್‌ಗೆ ಸಿಕ್ಕ ಅವಕಾಶವೆಂದರೆ ವೊಡ್‌ವಿಲ್ ಪ್ರದರ್ಶನಗಳು. ಇಪ್ಪತ್ತು, ಮೂವತ್ತರ ದಶಕಗಳ ಸುಮಾರಿನಲ್ಲಿ ಅಮೆರಿಕದಲ್ಲಿ ಈ ವೊಡ್‌ವಿಲ್ ಆಟಗಳು ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದ್ದವು. ''ವಿವಿಧ ವಿನೋದಾವಳಿ'' ರೀತಿಯ ಈ ಕಾರ್ಯಕ್ರಮಗಳಲ್ಲಿ ಜಾನಪದ ಗೀತೆಗಳು, ಹಾಸ್ಯಭರಿತ ಕಿರುನಾಟಕಗಳು, ಕೀಟಲೆ ನರ್ತನಗಳು (Strip tease), ಹಾಸ್ಯ ಹರಟೆಗಳು ಮುಂತಾದವುಗಳಿಂದ ತುಂಬಿದ್ದು ಹೊಸ ಹಾಸ್ಯಗಾರರಿಗೆ ಒಳ್ಳೇ ಅಖಾಡವಾಗಿತ್ತು. ಬಾಬ್‌ನ ಹಾಸ್ಯ ಬಹಳಷ್ಟು ಮಟ್ಟಿಗೆ ಆಶು ಭಾಷಣದ ರೂಪ ಎನ್ನಬಹುದು. ಭಾಷಣ ಅಲ್ಲ, ಆಶು ಹರಟೆ. ಅಮೆರಿಕದಲ್ಲಿ ಇದನ್ನು Ad-libbing ಎನ್ನುತ್ತಾರೆ. ಬಾಬ್ ಹೋಪ್‌ನ Ad-libbing ವರಸೆಯ ಹಲವು ತುಣುಕುಗಳನ್ನು ನೋಡಿ.

''ನಾವು ಓಕ್ಲಹಾಮಾ ಸೇರಿದಾಗ ಅಲ್ಲಿ ಮಳೆ ಇಲ್ದೆ ಎಷ್ಟು ದಿನ ಆಗಿತ್ತು ಅಂದ್ರೆ, ಮರಗಳು ನಾಯಿಗಳನ್ನ ಅಟ್ಟಿಸಿಕೊಂಡು ಹೊರಟಿದ್ದವು. ನೆಬ್ರಾಸ್ಕ ಸೇರಿದಾಗ ಅಲ್ಲಿ ಅಂಚೆ ಕಛೇರಿಯಲ್ಲಿ ಸ್ಟಾಂಪ್‌ಗಳ ಜೊತೆಗೆ ಗುಂಡು ಸೂಜಿ ಕೂಡ ಕೊಡ್ತಾ ಇದ್ರು. ಚುಚ್ಚಿ ಸಿಕ್ಕಿಸಲಿ ಅಂತ.''

''ಎರಡನೇ ಮಹಾಯುದ್ಧದ ಅನಂತರ ಅಮೆರಿಕದಲ್ಲಿ ಹೊಸ ಹೊಸ ರೀತಿಯ ಕಾರುಗಳು ಬರ್ತಿದೆ ರೀ. ಏನೆಲ್ಲಾ ಸೊಬಗು ಅಂತೀರಾ ಈ ಕಾರುಗಳಿಗೆ. ಕಿಟಕಿ ಗಾಜು ಏರಿಸೋಕ್ಕೆ, ಇಳಿಸೋಕ್ಕೆ ಒಂದು ಒತ್ತು ಗುಂಡಿ. ಮೇಲಿನ ಛಾವಣಿನ ಏರಿಸೋಕ್ಕೆ, ಇಳಿಸೋಕ್ಕೆ ಒಂದು ಒತ್ತು ಗುಂಡಿ. ಕೊನೆಗೆ ಕಾರಿನ ಬೆಲೆ ಏರಿಸೋಕ್ಕೆ, ಇಳಿಸೋಕ್ಕೆ ಸಹಾ

ಒಂದು ಒತ್ತು ಗುಂಡಿ. ಅದನ್ನ ಒತ್ತಿದರೆ, ನಿಮ್ಮ ಸ್ನೇಹಿತರ ಮುಂದೆ ಅದು ಕಾರಿನ ಬೆಲೆ ಏರಿಸಿ, ಸಾಲಗಾರರ ಮುಂದೆ ಬೆಲೆನ ಇಳಿಸಿ ಹೇಳುತ್ತೆ. ಈ ಕಾರು ತಯಾರಕರು ಒಂದು ಸ್ಪೆಷಲ್ ಮಾಡಲ್ ಬೇರೆ ತಯಾರಿಸಿದ್ದಾರೆ. ಅದರ ಹಿಂದಿನ ಸೀಟಿನಲ್ಲಿ ನೀವು ನಿಮ್ಮ ಪ್ರೇಯಸಿಯೊಂದಿಗೆ ಕೂತಿದ್ದಾಗ ಒಂದು ವೇಳೆ ನಿಮ್ಮ ಮಾತುಕತೆ ಅವಳಿಗೆ ಆಕಳಿಕೆ ಬರಿಸೋ ಹಾಗಾದ್ರೆ, ಒಂದು ಗುಂಡಿ ಒತ್ತಿದರೆ ಸಾಕು, ಒಬ್ಬ ಐರಿಷ್ ನಗೆಗಾರ ಪ್ರತ್ಯಕ್ಷ ಆಗಿ ಅವಳನ್ನ ನಗಿಸಿ ಹದ ಮಾಡ್ತಾನೆ. ಒಳ್ಳೇ ಮೋಜಿನ ಕಾರುಗಳಿವೇರಿ, ನಮ್ಮ ದೇಶದಲ್ಲಿ.''

''ನನ್ನ ಕಾರನ್ನು ಕೊಂಡಾಗ ನನಗೆ ನಾಲ್ಕೇ ಟಯರುಗಳನ್ನು ಕೊಟ್ರು. ಐದನೇದು ಎಲ್ರೀ ಅಂತ ಅಂಗಡಿಯವನನ್ನು ಕೇಳಿದ್ರೆ ಅವನೇನಂದ ಗೊತ್ತೆ? 'ನಿಮ್ಮ ಸೊಂಟದ ಸುತ್ತಾನೇ ಇದೆಯಲ್ಲ, ಸ್ವಾಮಿ'. ದೊಡ್ಡೋರು ಅಂದ್ರೆ ಸ್ವಲ್ಪಾನೂ ಮರ್ಯಾದೆ ಇಲ್ಲ ನೋಡಿ ಈ ಹುಡುಗಿಗೆ'' (ಬಾಬ್ ಬೊಜ್ಜಿನ ಆಸಾಮಿ).

''ಬಹಳ ವರ್ಷಗಳ ನಂತರ ನಾನು ಪುನಃ ಕ್ಲೀವ್‌ಲೆಂಡ್‌ಗೆ ಹೋದೆ. ಜನ ಎಷ್ಟು ಪ್ರೀತಿಯಿಂದ ನನ್ನನ್ನು ಸ್ವಾಗತಿಸಿದರು ಅಂತೀರಿ. ಎಲ್ಲೆಲ್ಲೂ ತಳಿರು ತೋರಣಗಳು. ನಾನು ಓದ್ತಾ ಇದ್ದ ಹಳೇ ಸ್ಕೂಲಿಗೂ ಹೋಗಿದ್ದೆ. ಅಲ್ಲಿ ಮೂರನೇ ಕ್ಲಾಸನ್ನು ನಾನಿದ್ದಾಗ ಹೇಗಿತ್ತೋ ಹಾಗೇ ಇಟ್ಟಿದ್ದಾರೆ. ಅದೇ ಕುರ್ಚಿ. ಅದೇ ಮೇಜು. ಅದೇ ಶಾಯಿ ಕುಡಿಕೆ. ಆ ಮೇಜಿನ ಮೇಲೆ ಒಂದು ಚಿಕ್ಕ ಫಲಕ. ''ಬಾಬ್ ಹೋಪ್ ಇಲ್ಲೇ ಮಲಗಿದ್ದ ಅಂತ.''

ಬಾಬ್ ತನ್ನ ಎಳೆತನದ ಊರಾದ ಕ್ಲೀವ್‌ಲೆಂಡ್‌ಗೆ ಹೋದಾಗ ಅಲ್ಲಿನ ಮೇಯರ್ ಹಾಗೂ ಹಳೆಯ ಒಡನಾಡಿ ಲೌಷೆ, ಬಾಬ್‌ನ ಗೌರವಾರ್ಥವಾಗಿ ಒಂದು ಸತ್ಕಾರಕೂಟ ಏರ್ಪಡಿಸುತ್ತಾನೆ.

ಅಲ್ಲಿನ ಒಂದು ಸಂಭಾಷಣೆ:

ಲೌಷೆ: ಬಾಬ್, ನೀನು ನಮ್ಮ ಕ್ಲೀವ್‌ಲೆಂಡ್ ನಗರಕ್ಕೆ ಮಾಡಿರೋ ಅನೇಕ ಕೆಲಸ ಕಾರ್ಯಗಳಿಗಾಗಿ ನಮ್ಮೆಲ್ಲರ ಹಾರ್ದಿಕ ಕೃತಜ್ಞತೆಗಳು.

ಬಾಬ್: ಕೆಲಸ ಕಾರ್ಯಗಳು? ನಾನೇನು ಕೆಲಸ ಮಾಡಿದ್ದೆ? 1928 ರಲ್ಲೇ ನಾನು ಈ ಊರನ್ನ ಬಿಟ್ಟು ಹೊರಟು ಹೋಗಿದ್ದೆ.

ಲೌಷೆ: ನಾನೇನು ಹೇಳಲು ಬಾಬ್. ನೀನೇ ಪ್ರಶ್ನೆ ಕೇಳಿ, ನೀನೇ ಉತ್ತರ ಕೊಟ್ಟುಬಿಟ್ಟೆಯಲ್ಲ.

ಬಾಬ್ ಹೋಪ್ ಬರಿಯ ಹಾಸ್ಯಗಾರನಾಗಿರುವುದರಲ್ಲೇ ತೃಪ್ತಿ ಪಡಲಿಲ್ಲ. ಎರಡನೇ ಮಹಾಯುದ್ಧದ ಸಮಯದಲ್ಲಿ ಅಮೆರಿಕದ ಪಡೆಗಳಿಗೆ ಉಚಿತ ಮನರಂಜನೆ ನೀಡುವುದರಲ್ಲಿ ಬಾಬ್ ಅತಿ ಮುಖ್ಯ ಪಾತ್ರ ವಹಿಸಿದ್ದ. ಅಮೆರಿಕದ ಸೈನಿಕ ನೆಲೆಗಳಲ್ಲಿ ಇಂಗ್ಲೆಂಡ್, ಫ್ರಾನ್ಸ್, ಎಲ್ಲೆಂದರಲ್ಲಿ ತನ್ನ ನಟ, ನಟಿಯರ ಗುಂಪಿನೊಂದಿಗೆ ಬಿಡುವಿಲ್ಲದೇ ಅಲೆದಾಡಿ ಬಾಬ್ ತನ್ನ 'ವಿವಿಧ ವಿನೋದಾವಳಿ' ಕಾರ್ಯಕ್ರಮಗಳನ್ನು ನಡೆಸಿಕೊಟ್ಟು

ಸೈನಿಕರ ಅಭಿಮಾನ, ಮೆಚ್ಚುಗೆಗಳಿಗೆ ಪಾತ್ರನಾಗಿದ್ದ. 'ಗುಂಪಿಗೆ ತಕ್ಕ ಹಾಸ್ಯ' ಎಂಬುದು ಬಾಬ್‌ನ ತತ್ವ. ಈ ಸೈನಿಕ ಗುಂಪುಗಳಲ್ಲಿ ಬಾಬ್ ಹಾರಿಸಿದ ಹಾಸ್ಯ ಚಟಾಕಿಗಳ ಸ್ಯಾಂಪಲ್‌ಗಳು:

ಪಾಶ್ಚಿಮಾತ್ಯ ಸಮಾಜದಲ್ಲಿ ಯಾರನ್ನಾದರೂ ಬೆರಳು ತೋರಿಸಿ ಸೂಚಿಸುವುದು ಶಿಷ್ಟಾಚಾರವಲ್ಲ. ಅದಕ್ಕಾಗಿ ಮಕ್ಕಳು ಯಾರನ್ನಾದರೂ ಬೆರಳು ಮಾಡಿ ತೋರಿಸಿದರೆ ತಂದೆ, ತಾಯಿಯರು "Mus'nt point" ಅನ್ನುವುದು ವಾಡಿಕೆ. ಒಮ್ಮೆ ಒಬ್ಬ ತುಂಬು ವಕ್ಷದ ಜವ್ವನೆ ಸ್ವೆಟರ್ ಧರಿಸಿ, ಬೆನ್ನ ಹಿಂದೆ ಕೈ ಕಟ್ಟಿಕೊಂಡು ನಿಂತಿದ್ದನ್ನು ಕಂಡ ಬಾಬ್, "Mus'nt point" ಅಂತ ಶಿಷ್ಟಾಚಾರ ಹೇಳಿ ಕೊಟ್ಟನಂತೆ!

ಇನ್ನೊಮ್ಮೆ ಕಾಲೇಜ್ ಕ್ಯಾಂಪಸ್ ಒಂದರಲ್ಲಿ ಖ್ಯಾತ ಚಿತ್ರನಟಿ ಅನಿಟಾ ಎಕ್‌ಬರ್ಗ್‌ಳನ್ನು ಪರಿಚಯಿಸುವ ಅವಕಾಶ ಬಾಬ್‌ಗೆ ಒದಗಿ ಬಂತು. ಅನಿಟಾಳದ್ದು ಹೇಳಿ ಕೇಳಿ ಒಳ್ಳೇ ಅಂಗ ಸೌಷ್ಠವ. ರಾಜಾ ವಿಷ್ಣುವರ್ಧನನ ಕಾಲದಲ್ಲಿದ್ದಿದ್ದರೆ ಬೇಲೂರಿನ ಶಿಲಾಬಾಲಿಕೆಯರ ಶಿಲ್ಪಗಳಿಗೆ ರೂಪದರ್ಶಿನಿಯಾಗಬಹುದಾಗಿದ್ದಂತಹ ಮೈಮಾಟ. ಬಾಬ್ ಶುರು ಮಾಡಿದ.

''ಮಿಸ್ ಅನಿಟಾ ಎಕ್‌ಬರ್ಗ್ ಅವರು ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವ ವಿದ್ಯಾನಿಲಯವನ್ನು ಪ್ರತಿನಿಧಿಸುತ್ತಿದ್ದಾರೆ.''

ಅಷ್ಟು ಹೇಳಿ, ಅನಿಟಾಳನ್ನು ಆಪಾದಮಸ್ತಕ ನೋಡಿ,

"What a campus!" ಅಂತ ಉದ್ಗರಿಸಿದನಂತೆ.

ನ್ಯೂಯಾರ್ಕ್‌ನಲ್ಲಿ ಒಮ್ಮೆ ಒಂದು ಪೆರೇಡ್ ನಡೆದಿತ್ತು. ಬಾಬ್ ಹೋಪ್‌ಗೆ ಆ ಪೆರೇಡಿನ ವೀಕ್ಷಕ ವಿವರಣೆ ನೀಡುವ ಕೆಲಸ. ನ್ಯೂಯಾರ್ಕಿನ ಮೇಯರ್ ವಿನ್ಸೆಂಟ್ ಅಂದಿನ ಮುಖ್ಯ ಅತಿಥಿ. ನಮ್ಮ ಬೆಂಗಳೂರಿನ ಒಬ್ಬ ಮಾಜಿ ಮೇಯರಂತೆ. ವಿನ್ಸೆಂಟ್ ಸಹಾ ತನ್ನ ಅಧಿಕಾರಾವಧಿಯ ಬಹುಪಾಲು ಸಮಯವನ್ನು ವಿದೇಶ ಪ್ರವಾಸಗಳಿಗೆ ವಿನಿಯೋಗಿಸುತ್ತಿದ್ದ. ಬಾಬ್ ಹೀಗೆ ಪ್ರಾರಂಭಿಸಿದ:

''ಪೆರೇಡ್ ಒಳ್ಳೇ ಮಜಬೂತಾಗಿದೆ. ಪೆರೇಡಿನ ಸಾರ್ಜೆಂಟ್ ಖಾಕಿ ಸಮವಸ್ತ್ರ ಧರಿಸಿ ಕೈಯಲ್ಲಿ ಬೆಳ್ಳಿ ಕೋಲು ಹಿಡಿದಿದ್ದಾನೆ. ರಥದ ಮೇಲೆ ಕುಳಿತ ನ್ಯೂಯಾರ್ಕ್ ಸುಂದರಿ ಪಿಂಕ್ ಬಣ್ಣದ ಮನಮೋಹಕ ಸ್ಕರ್ಟ್ ಧರಿಸಿ ಕೈಯಲ್ಲಿ ಪುಷ್ಪಗುಚ್ಛ ಹಿಡಿದಿದ್ದಾಳೆ. ನಮ್ಮ ಜನಪ್ರಿಯ ಮೇಯರ್ ವಿನ್ಸೆಂಟ್ ಬಿಳೀ ಸೂಟು ಧರಿಸಿ, ಕೈಯಲ್ಲಿ ಸೂಟ್‌ಕೇಸ್ ಹಿಡಿದಿದ್ದಾರೆ.''

ಎಪ್ಪತ್ತರ ದಶಕದಲ್ಲಿ ಬಾಬ್‌ಗೆ ಅಮೆರಿಕದ ಅಧ್ಯಕ್ಷರಿಂದ ದೇಶದ ಅತ್ಯುನ್ನತ ಸನ್ಮಾನ ದೊರೆಯಿತು. ವೈಟ್‌ಹೌಸ್ ಸಮಾರಂಭವೊಂದರಲ್ಲಿ ಆ ಬಹುಮಾನವನ್ನು ಸ್ವೀಕರಿಸುತ್ತಾ ಬಾಬ್ ಹೇಳಿದ ಮಾತುಗಳಿವು.

"ಅಮೆರಿಕದ ಪಡೆಗಳಿಗೆ ಮನರಂಜನೆ ನೀಡಲೆಂದು ನಾನು ಕೈಗೊಂಡ ಅನೇಕ ವಿದೇಶ ಪ್ರವಾಸಗಳಿಗಾಗಿ ಈ ಸನ್ಮಾನವೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ನಾನು ಅಷ್ಟು ಬಾರಿ ದೇಶಬಿಟ್ಟು ಹೋಗಿದ್ದಕ್ಕಾಗಿ ಈ ಸನ್ಮಾನ ನೀಡಿರುವುದಾದರೆ, ನೀವೆಲ್ಲಾ ನನಗೆ ಪರೋಕ್ಷವಾಗಿ ಏನನ್ನೋ ಹೇಳಲು ಯತ್ನಿಸುತ್ತಿದ್ದೀರ ಎಂಬ ಸಂಶಯ ನನಗೆ."

ಬಾಬ್ ಹೋಪ್ ನಿಜಕ್ಕೂ ಹಾಸ್ಯ ಪ್ರಪಂಚಕ್ಕೆ ಅಮೆರಿಕ ನೀಡಿದ ಉತ್ಕೃಷ್ಟ ಕೊಡುಗೆ.

★★★


ಸೂಚನೆ

ಅಪರಂಜಿ ಪತ್ರಿಕೆಯನ್ನು ಕುರಿತ ಎಲ್ಲ ವಿವರಗಳು, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವುದು, ಎರಡು ಪ್ರತಿಗಳ ಬಟವಾಡೆ, ಮತ್ತು ಇನ್ನಾವುದೇ ಮಾಹಿತಿಗಾಗಿ ದಯವಿಟ್ಟು ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಇವರನ್ನು ಸಂಪರ್ಕಿಸಬೇಕಾಗಿ ಮನವಿ. ಚಂದಾ ಹಣ ಪಾವತಿಯನ್ನೂ ಸಹಾ ಚೆಕ್ ಮುಖಾಂತರ, ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ಇಂದಿನಿಂದ ಶ್ರೀ ಬೇಲೂರು ರಾಮಮೂರ್ತಿಯವರ ವಿಳಾಸಕ್ಕೇ ಮಾಡಿರೆಂದು ವಿನಮ್ರ ಕೋರಿಕೆ. ಶ್ರೀಯುತ ರಾಮಮೂರ್ತಿಯವರ ವಿಳಾಸ ಇಂತಿದೆ.

ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ (ದೂರು ವಾಣಿ?): 26688488, ಮೊಬೈಲ್: 9886061400, ಈಮೇಯ್ಲ್: br_murthy@vsnl.net

ಪತ್ರಿಕೆಗೆ ಕಳುಹಿಸುವ ಲೇಖನಗಳನ್ನು ಎಂದಿನಂತೆ ನಮ್ಮ ಕಛೇರಿಯ ವಿಳಾಸಕ್ಕೇ ಕಳುಹಿಸಬಹುದು. ಲೇಖನಗಳು ನುಡಿ ಅಥವಾ ಬರಹ ಫಾರ್ಮ್ಯಾಟಿನಲ್ಲಿದ್ದರೆ, ಅವುಗಳನ್ನು ನೇರವಾಗಿ aparanji@ hotmail.com ವಿಳಾಸಕ್ಕೆ email ಮಾಡಬಹುದು. ಲೇಖನದ ಒಂದು ಪ್ರತಿಯನ್ನು br_murthy@vsnl.net ವಿಳಾಸಕ್ಕೆ email ಮಾಡಿದರೆ ಅನುಕೂಲ.

ಈ ನಿಟ್ಟಿನಲ್ಲಿ ಎಲ್ಲ ಬರಹಗಾರರ ಹಾಗೂ ಓದುಗರ ಸಹಕಾರವನ್ನು ಬೇಡುತ್ತೇವೆ.


ಮತದಾರ!..
ವಿರೋಧಿ ಪಕ್ಷ!..
ಪಕ್ಷಾಂತರಿ!..
ಈ ಪಕ್ಷ
ಆ ಪಕ್ಷ
ಸರ್ಕಾರಿ ಫೈಲ್!..
ಅರ್ಜೆಂಟ್ ಫೈಲ್...
ರಾಜ್ಯಸರ್ಕಾರ
ಬೆಲೆ ಸೂಚ್ಯಂಕ!..
ಭ್ರಷ್ಟಾಚಾರ!..
ಲಂಚ.ರೂ.

'ದೊಡ್ಡ'ವರೊಡನೆ ಅನುಭವಗಳು

– ಡಿ. ರಮೇಶ್

ಭಾರತ ಸರ್ಕಾರದ ಒಂದು ಇಂಟರ್‌ನ್ಯಾಷನಲ್ ಟ್ರೇಡಿಂಗ್ ಕಾರ್ಪೊರೇಷನ್ ವತಿಯಿಂದ ನನ್ನನ್ನು ಜರ್ಮನಿಯ ಆಫೀಸಿಗೆ ಹೆಡ್ಡಾಗಿ ಕಳುಹಿಸಿದ್ದರು ಎಂದು ನನ್ನ ಒಂದು ಬೇರೆ ಲೇಖನದಲ್ಲಿ ಹೇಳಿದ್ದೆ.

ನನ್ನ ಈ ಹುದ್ದೆಯ ಕಾರಣ ಅನೇಕಾನೇಕ ರಾಜಕೀಯ ಪುಢಾರಿಗಳು, ಮಂತ್ರಿಗಳು, ಉನ್ನತ ಅಧಿಕಾರಿಗಳು - ಇಂಥವರನ್ನು ಹತ್ತಿರದಿಂದ ನೋಡಿ, ಅವರ ಬಗ್ಗೆ ತಿಳಿಯುವ ಅನೇಕ ಅವಕಾಶಗಳು ಬಂದವು.

ಜರ್ಮನಿಯಲ್ಲಿ ನನ್ನ ಆಫೀಸು ಇದ್ದದ್ದು ಫ್ರ್ಯಾಂಕ್ ಫರ್ಟ್ ನಗರದಲ್ಲಿ. ಇಲ್ಲಿನ ಏರ್-ಪೋರ್ಟ್ ಯೂರೋಪಿನ ಕೇಂದ್ರಬಿಂದುವಿನಂತಿದ್ದು, ಮುಂದೆ ಎಲ್ಲಿ ಹೋಗಬೇಕಾದರೂ (ಉದಾ: ಪೂರ್ವ ಯೂರೋಪು, ಉತ್ತರ ಮತ್ತು ದಕ್ಷಿಣ ಅಮೇರಿಕಾಗಳು) ಫ್ರ್ಯಾಂಕ್ ಫರ್ಟಿಗೆ ಬರಬೇಕಿತ್ತು. ಇದಲ್ಲದೆ, ಜರ್ಮನಿಯೇ ಒಂದು ವಿಶೇಷ ಮಾರ್ಕೆಟ್ ಆಗಿತ್ತು. ಹೀಗಾಗಿ, ಉನ್ನತ ಅಧಿಕಾರಿಗಳು, ಮಂತ್ರಿಗಳು (ಅದರಲ್ಲೂ ಕೇಂದ್ರ ಸರಕಾರದ್ದು), ಡೆಲಿಗೇಶನ್ನುಗಳು ಲೆಖ್ಖವಿಲ್ಲದಷ್ಟು ಬರುತ್ತಿದ್ದರು/ಬರುತ್ತಿದ್ದವು. ಸಾಧಾರಣವಾಗಿ, ನಮಗೆ ಮುಂಚೆಯೇ ಅಂತಹ ವಿಸಿಟ್ಟುಗಳ ಬಗ್ಗೆ ಸಮಾಚಾರ ಬರುತ್ತಿತ್ತು.

ಒಮ್ಮೆ ನಮ್ಮ ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯ್ ಬಂದಿದ್ದರು. ಅವರನ್ನು ಏರ್ಪೋರ್ಟಿನಲ್ಲಿ ಹೋಗಿ ಕಾಣಬೇಕು ಎಂದು ಟೆಲೆಕ್ಸ್ ಬಂತು. ಸರಿ. ನಮ್ಮ ಇತರ ಭಾರತ ಸರ್ಕಾರದ ಆಫೀಸಿನ ಬಾಸುಗಳ ಜತೆ ಏರ್ಪೋರ್ಟಿಗೆ ಹೋಗಿ ಲೈನಾಗಿ ನಿಂತಿದ್ದೆವು. ನಮ್ಮ ರಾಯಭಾರಿಗಳು ನಮ್ಮನ್ನು ಒಬ್ಬೊಬ್ಬರಾಗಿ ಪರಿಚಯಿಸುತ್ತಿದ್ದರು. ನನ್ನ ಸರದಿ ಬಂತು. ಸರಿ, ಕೈ ಕುಲುಕಿಯಾಯ್ತು. ಆದರೆ ಅವರನ್ನು ನೋಡಿದಾಗಿನಿಂದ ಅವರು ತಮ್ಮ ಮೂತ್ರವನ್ನು ಕುಡಿಯುತ್ತಾರೆ ಎಂಬ ನೆನಪು ಕಾಡುತ್ತಿತ್ತು. ಅವರ ಕೈ ಕುಲುಕಿದ ತಕ್ಷಣ ಏನೋ ಅಸಹ್ಯ, ಏನೋ ಮುಜುಗರ. ತಕ್ಷಣ ಕೈ ತೊಳೆಯಬೇಕು ಎನ್ನುವ ಕಾತರ. ನಿಜವಾಗಿ ಫಸ್ಟ್ ಆಪರ್ಚುನಿಟಿ ಹೋಗಿ ಸೋಪ್ ಹಾಕಿ ಕೈ ತೊಳೆದೆ! ದೇಸಾಯಿಯವರು ಹೊರಬರುತ್ತಲೇ, ಅಲ್ಲಿ ಕಾದಿದ್ದ ಪತ್ರಕರ್ತರು ಅವರನ್ನು ಪ್ರಶ್ನಿಸಲು ಕಾದಿದ್ದರು. ಶುರುವಾಯ್ತು, ಪತ್ರಿಕಾಗೋಷ್ಠಿ. ಕೇಳಿದ ಪ್ರಶ್ನೆಗಳೆಲ್ಲ ಇವರು ಕುಡಿಯುವ ಮೂತ್ರದ ಬಗ್ಗೆಯೇ! ಪಿ.ಎಂ.ಗೆ ಕೋಪ ಬಂತು. ನಾನು ಭಾರತದ ಪ್ರಧಾನಿ. ನನಗೆ ಕೇಳಲು ಬೇರೆ ಪ್ರಶ್ನೆಗಳೇ ಇಲ್ಲವೆ ಎಂದು ರೇಗಾಡಿದ್ದು ನೆನಪು.

ಇನ್ನೊಬ್ಬ ಪುಢಾರಿ ಬಂದು ಕೆಲ ದಿನಗಳೇ ಇದ್ದರು. ಆ ನಮ್ಮೂರಲ್ಲಿ ಎಲೆಕ್ಟ್ರಾನಿಕ್ ಸಾಮಾನುಗಳು ಬಹು ಜನಪ್ರಿಯವಾಗಿದ್ದವು. ನಾನು ಹೇಳಿದ ಯಜಮಾನರು ನನ್ನ ಬಳಿ ಬಂದು 'ರಮೇಶ್ ಸಾಬ್, ಕುಛ್ ಪೈಸೇ ಬಚೇ ಹೈ, ಬತಾಯಿಯೆ ಕ್ಯಾ ಕರೂ? (ದುಡ್ಡು

ಸ್ವಲ್ಪ ಮಿಕ್ಕಿದ, ಹೇಳಿ ಏನು ಮಾಡಲಿ)' ಅಂದರು. ನಾನೆಂದೆ, ಬನ್ನಿ ನನ್ನ ಗುರುತಿನ ಅಂಗಡಿಯಲ್ಲಿ ಎಲ್ಲಾ ತರಹದ ಎಲೆಕ್ಟ್ರಾನಿಕ್ ಸಾಮಾನುಗಳು ಇವೆ, ಕನ್ಸೆಷನ್ ಕೊಡಿಸ್ತೀನಿ ಅಂದೆ. ಅವರು ಬೇಡ, ಆ ತರಹದ ಎಲ್ಲಾ ಕೊಂಡಾಯ್ತು, ಬೇರೆ ಏನಾದರೂ ಅಂದರು. ಅರ್ಥವಾಗಲಿಲ್ಲ ಎಂದೆ ಅವರಿಗೆ. ಅವರು ಸ್ವಲ್ಪ ನಸುನಕ್ಕು, ನಾಚುತ್ತಾ ಎಂಬಂತೆ, ಮೈ ಲಡಕೀಕ ಬಾರೇಮೇ ಸೋಚ್ ರಹಾಥ ಎಂದರು. ಆವಾಗ ಅವರಿಗೆ ಕೊನೆಯಪಕ್ಷ ಎಪ್ಪತ್ತು ವಯಸ್ಸಾಗಿತ್ತು. ನನಗೆ ತುಂಬಾ ಇಂಪ್ರೆಸ್ ಆಯ್ತು. ಎಪ್ಪತ್ತರಲ್ಲೂ ಹೀಗೆ! ಭೇಷ್, ನಮ್ಮ ದೇಶದ ರಾಜಕೀಯಕ್ಕೆ ಭವಿಷ್ಯ ಅದ್ಭುತವಾಗಿದೆ ಎನ್ನಿಸಿತು. ನಾನು ಉತ್ತರಿಸಿದೆ ನನಗೆ ಇದರ ಬಗ್ಗೆ ಅಷ್ಟು ಗೊತ್ತಿಲ್ಲ ಆದರೆ ಕಾಯ್ಸರ್ ಸ್ಟ್ರಾಸ್ಸೆ ಎಂಬ ರಸ್ತೆ ತುಂಬ ಬರಿ ವೇಶ್ಯೆಯರು ಅಥವಾ ಇಗೊಳ್ಳಿ ಈ ಮ್ಯಾಗಜೀನ್ ಎಂದು ಒಂದು ವಾರಪತ್ರಿಕೆ ಕೊಟ್ಟೆ. ಅದು ಪ್ರತಿ ಬುಧವಾರ ಎಲ್ಲರ ಮನೆಗೂ ಬಿಟ್ಟಿ ಹಾಕಿ ಹೋಗುತ್ತಿದ್ದರು. ಅದರಲ್ಲಿ ''ಕೊನ್ಟಾಕ್ಟೆ'' (ಅಂದರೆ ಕಾನ್ಟಾಟ್ಸ್). ಅದರಲ್ಲಿ ಎರಡು ಪುಟಗಳ ತುಂಬಾ ತಮ್ಮ ಒಡಲನ್ನು ವರ್ಣಿಸಿ ಜಾಹಿರಾತು ಮಾಡಿದ ಹೆಣ್ಣುಗಳ ವಿಸ್ತಾರ ವರ್ಣನೆ ಇರುತ್ತಿತ್ತು. ಒಬ್ಬಳ ಫಿಗರ್ ಇಷ್ಟು ದೊಡ್ಡದು, ನಿತಂಬ ಎಷ್ಟು, ತಾನೇನು ಸ್ಪೆಶಲ್ಲಾಗಿ ಮಾಡಬಲ್ಲೆ ಇತ್ಯಾದಿಗಳ ವಿವರ. ಅದನ್ನು ಯಜಮಾನರಿಗೆ ಕೊಟ್ಟು, ಸ್ವಾಮಿ ತಮ್ಮ ಇಷ್ಟ ಬಂದವಳನ್ನು ನಿಮ್ಮ ರೂಮಿಗೆ ಕರೆಸಿಕೊಳ್ಳಿ ಎಂದೆ. ಈ ವ್ಯಕ್ತಿ ಕೆಲವರುಷಗಳ ನಂತರ ಭಾರತದ ಒಂದು ಬಲು ಹಳೆಯ, ದೊಡ್ಡ ರಾಜಕೀಯ ಪಾರ್ಟಿಗೆ ಅಧ್ಯಕ್ಷರಾಗಿ ಇನ್ನೇನು ಪ್ರಧಾನಿಯಾಗಬೇಕಿತ್ತು. ಕಾರಣಾಂತರದಿಂದ ಆಗಲಿಲ್ಲ.

ಶ್ರೀ ಪಿ.ವಿ. ನರಸಿಂಹರಾಯರು ಕಾಮರ್ಸ್ ಮಿನಿಸ್ಟರ್ ಆಗಿದ್ದಾಗ ನಮ್ಮೂರಿಗೆ ಒಮ್ಮೆ ಬಂದಿದ್ದರು. ಅವರೊಡನೆ ಒಂದೂವರೆ ಘಂಟೆಗಳ ಕಾಲ ಕಳೆಯುವ ಸುಯೋಗ ದೊರೆತಿತ್ತು. ಗಂಭೀರ ಪ್ರಕೃತಿ, ಮುಗುಳ್ನಗೆಯೂ ಕಡಿಮೆ. ನನಗೆ ಗೊತ್ತಿದ್ದ ಸುಭಾಷಿತಗಳನ್ನು ಮತ್ತು ತಿಳಿದಿದ್ದ ಎರಡು ತೆಲುಗು ಪದಗಳನ್ನು ಉಪಯೋಗಿಸಿ, ನಾನು ಮಾಡುತ್ತಿದ್ದ ಎಕ್ಸ್‌ಪೋರ್ಟ್ ಬಗ್ಗೆ ವಿವರಿಸಿದೆ. ಸಂದರ್ಭಕ್ಕೆ ಸರಿಯಾದ ಪ್ರಶ್ನೆಗಳನ್ನು ಕೇಳಿದರು. ದೇವರದಯೆಯಿಂದ ಜರ್ಮನಿಯಲ್ಲಿ ನನ್ನ ಪರ್ಫಾರ್ಮೆನ್ಸ್ ನಿಜವಾಗಿಯೂ ತುಂಬಾನೇ ಚೆನ್ನಾಗಿತ್ತು. 'ಕೀಪ್ ಇಟ್ ಅಪ್ ಯಂಗ್ ಮಾನ್' ಎಂದರು.

ಕೆಲ ಕಾಲದ ನಂತರ ಶ್ರೀ ವಿ.ಪಿ. ಸಿಂಗ್ ಕಾಮರ್ಸ್ ಮಂತ್ರಿಯಾದರು. ತಕ್ಷಣ ಅವರು ಬ್ರೆಜಿಲ್‌ಗೆ ಹೋಗಬೇಕಿತ್ತು. ಹೀಗಾಗಿ ನಮ್ಮೂರಿಗೆ ಬಂದರು. ಆವಾಗ ನಮ್ಮ ಕಾನ್ಸಲ್ ಜನರಲ್ ಊರಿನಲ್ಲಿರಲಿಲ್ಲ. ಅವರೊಡನೆ ಸುಮಾರು ಐದಾರು ಘಂಟೆಗಳ ಕಾಲ ಇದ್ದೆ. ಉತ್ತರ ಪ್ರದೇಶದ ಯಾವುದೋ ಒಂದು ಸಣ್ಣ ರಾಜ್ಯದ ರಾಜನ ದತ್ತು ಮಗ ಇವರು. ತುಂಬಾ ಗಾಂಭೀರ್ಯ. ತುಂಬಾ ಗೌರವ ಕೊಟ್ಟು ಮಾತನಾಡುತ್ತಿದ್ದರು. ಆಗ ಕೆಲವು ವಾರಗಳು ನನ್ನ ಹೆಡ್ಡಾಫೀಸಿನ ಜತೆ ತಲೆ ಚಚ್ಚಿಕೊಳ್ಳುತ್ತಿದ್ದೆ. ಮೊಲಾಸೆಸ್ ಎಂಬ ವಸ್ತುವಿಗೆ ಬಹಳ ಒಳ್ಳೆ ಬೆಲೆ ಇದೆ, ರಿಲೀಸ್ ಮಾಡಿ ಅಂತ ಶ್ರೀ ಸಿಂಗರಿಗೆ ಇದರ ಬಗ್ಗೆ ಹೇಳಿದ್ದೆ. ತಕ್ಷಣ ಅವರು ತಮ್ಮ ಪಿ.ಯೆ.ಗೆ ಫೋನ್ ಮಾಡಿ ನಾನು ಹೇಳಿದೆ ಎಂದು ಹೇಳಿ

ಅಂದರು. (ಅಂದು ಸಂಜೆಯೇ ಡೆಲ್ಲಿಯಲ್ಲಿದ್ದ ಅವರೊಡನೆ ಮಾತನಾಡಿದೆ. 24 ಘಂಟೆಗಳಲ್ಲಿ ಸಾಂಕ್ಷನ್ ಬಂತು. ಮುಂದಿನ 24 ಘಂಟೆಗಳಲ್ಲಿ ಸುಮಾರು ಒಂದು ಲಕ್ಷ ಟನ್ ಮಾರಿ ನಮ್ಮ ಕಂಪನಿಗೆ ಸಾಕಷ್ಟು ಲಾಭ ಗಳಿಸಿದೆ). ಮಧ್ಯಾಹ್ನ ಏರ್ಪೋರ್ಟಿನಲ್ಲಿ ಠಳಾಯಿಸುತ್ತಾ, ಅಲ್ಲಿ ಪ್ರದರ್ಶಿಸಿದ್ದ ಸೀಕ್ರೆಟ್ ಡಿವೈಸಸ್ (ಉಂಗುರದಲ್ಲಿ ಟೇಪ್ ರೆಕಾರ್ಡರ್, ಗಡಿಯಾರದಲ್ಲಿ ಕ್ಯಾಮರ ಇತ್ಯಾದಿ). ಹಾಗೆಯೇ ಓಡಾಡುತ್ತಿದ್ದಾಗ, ಪಾಕಿಸ್ತಾನದ ಒಂದು ಮಿಲಿಟರಿ ತಂಡ ಕೆಲ ಜರ್ಮನರ (ಅವರು ಆತಿಥೇಯರಾಗಿರಬೇಕು) ಜತೆ ಹೋಗುತ್ತಿದ್ದರು. ಆ ಮಿಲಿಟರಿ ಆಫೀಸರುಗಳು ಹಾಕಿಕೊಂಡಿದ್ದ ಯೂನಿಫಾರ್ಮಿನಲ್ಲಿ ಭುಜದ ಮೇಲಿದ್ದ ರೆಜಿಮೆಂಟಲ್ ಸಿಂಬಲ್ ನೆನಪಿಟ್ಟುಕೊಂಡೆ. ಸಿಂಗ್ ಸಾಹೇಬರನ್ನ ಬೀಳ್ಕೊಟ್ಟು ಮನೆಗೆ ಬಂದೊಡನೆಯೇ ಯೂರೋಪಿನಲ್ಲಿದ್ದ ನಮ್ಮ ರಾ (ರಿಚರ್ಡ್ ಅಂಡ್ ಅನಾಲಿಸಿಸ್ ವಿಂಗ್ ಮಿತ್ರರಿಗೆ ಫೋನ್ ಮಾಡಿ ಪಾಕ್ ಆಫೀಸರುಗಳ ಬಗ್ಗೆ ತಿಳಿಸಿ ಅವರ ರೆಜಿಮೆಂಟ್ ಬಗ್ಗೆಯೂ ಹೇಳಿದೆ. 'ಭೇಷ್' ಅಂತಾರೆ ಅಂದುಕೊಂಡಿದ್ದೆ, ಅವರು ಗುಡ್, ಅವರ ಬಗ್ಗೆ ಇನ್ನೂ ತಿಳಿದು ಹೇಳಲು ಸಾಧ್ಯವೆ ಎಂದರು. ಅದು ನಿಮ್ಮ ಡಿಪಾರ್ಟ್ಮೆಂಟ್ ಕೆಲಸ, ನಾನು ಸಾಕಷ್ಟು ಲೀಡ್ ಕೊಟ್ಟಿದ್ದೇನೆ ಎಂದೆ. (ನಂತರ ಶ್ರೀ ಸಿಂಗರು ಪ್ರಧಾನ ಮಂತ್ರಿಗಳಾಗಿ, ಮಂಡಲ್ ಕಮಿಷನ್ನಿನ ಗೋಳು ಮಾಡಿ, ತಮ್ಮ ರಾಜಕೀಯ ಬದಲಾಯಿಸಿದ ಮೇಲೆ ಅವರನ್ನ ಅತ್ಯಂತ ದ್ವೇಷಿಸಲು ಆರಂಭಿಸಿದೆ ಇರಲಿ)

ಶ್ರೀ ಜೋಗೀಂದರ್ ಸಿಂಗ್ ಕರ್ನಾಟಕ ಕೇಡರಿನಲ್ಲಿದ್ದ ಸಿಬಿ ಐ.ಪಿ.ಎಸ್. ಅಧಿಕಾರಿ. (ಕಡೆಯಲ್ಲಿ ಇವರು ಸಿಬಿಐ ನಿರ್ದೇಶಕರಾಗಿ ನಿವೃತ್ತಿ ಹೊಂದಿದರು). ಇವರು ನಮ್ಮ ಮಂತ್ರಾಲಯದವಾದ ಕಾಮರ್ಸ್ ಮಂತ್ರಾಲಯದಲ್ಲಿ ಚೀಫ್ ವಿಜಿಲೆನ್ಸ್ ಆಫಿಸರ್ ಆಗಿದ್ದರು. ನಾನು ಜರ್ಮನಿಯಲ್ಲಿದ್ದಾಗ ಇವರಿಂದ ಒಂದು ಫೋನ್ ಕರೆ ಬಂತು. ನನಗೇನೋ ದುಗುಡ. ಇವರು ಯಾಕೆ ಫೋನ್ ಮಾಡಿರಬಹುದು, ನನ್ನ ಆಫೀಸಿನಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದೆಯೋ ಏನೋ ಎಂದು. ಶ್ರೀ ಸಿಂಗ್ (ಅವರನ್ನು ಚೆನ್ನಾಗಿ ಅರಿತ ಮೇಲೆ ತಿಳಿದದ್ದು) ಸದಾ ಹಸನ್ಮುಖಿ, ಮಾತನಾಡುವುದರಲ್ಲಿ, ಗೌರವ ತೋರಿಸುತ್ತಾರೆ. ಫೋನಿನಲ್ಲಿ ಅವರು ಮೊದಲು ಹೇಳಿದ್ದು: ರಮೇಶ್ ಸಾಬ್, ಇದು ಹೇಗೆ, ನಿಮ್ಮ ಸಂಸ್ಥೆಯಲ್ಲಿದ್ದುಕೊಂಡೂ (ನಾನಿದ್ದ ಸಂಸ್ಥೆ ತುಂಬಾ ಕರಪ್ಟ್ ಎಂದು ಹೆಸರು ಗಳಿಸಿತ್ತು) ನಿಮ್ಮ ಮೇಲೆ ಒಂದು ಕೇಸ್ ಇರಲಿ, ಒಂದು ಫೈಲ್ ಕೂಡಾ ಇಲ್ಲವಲ್ಲ!

ನನ್ನ ಮನಸ್ಸಿನ ದುಗುಡ ಹೀಗೆ ಮುಂಚೆ ನಿವಾರಿಸಿ ನಂತರ ಹೇಳಿದರು; ಮುಂದಿನ ತಿಂಗಳು ಯೂರೋಪಿಗೆ ಬರುತ್ತೇನೆ, ಜರ್ಮನಿ ಮತ್ತು ಡೆನ್ಮಾರ್ಕ್, ಸ್ವೀಡನ್, ಫಿನ್ಲಾಂಡ್ ದೇಶಗಳಿಗೆ ಭಾರತದಲ್ಲಿ ತಯಾರಾದ ಸ್ಪೋರ್ಟ್ಸ್ ಸಾಮಾನುಗಳನ್ನು ರಫ್ತು ಮಾಡಲು ಇರುವ ಸಾಧ್ಯತೆ ಮತ್ತು ಅವಕಾಶಗಳನ್ನು ಅಧ್ಯಯನ ಮಾಡಬೇಕು, ನನ್ನ ಜತೆ ನೀವೂ ಬರಬೇಕು ಎಂದರು. ಜರ್ಮನಿಯಲ್ಲಿ ನಿಮ್ಮ ಮನೆಯಲ್ಲೇ ಇರುತ್ತೇನೆ ಎಂದೂ ಹೇಳಿದರು. ಶ್ರೀಯುತರನ್ನು ಹಿಂದೆಂದೂ ಮೀಟಿರಲಿಲ್ಲ, ಅವರು ಹೇಗೆ, ಏನು ಒಂದೂ ತಿಳಿದಿರಲಿಲ್ಲ, ಅಂತೂ ಬಂದ ನಂತರ ಒಳ್ಳೆ ಸ್ನೇಹವೇ ಆಯ್ತು. ನಮ್ಮ ಮನೆಗೆ ಚೆನ್ನಾಗಿ

ಒಗ್ಗಿಕೊಂಡರು. ತುಂಬಾ ಫ್ರೆಂಡ್ಲಿ ವ್ಯಕ್ತಿ. ಸ್ವಲ್ಪವೂ ಆಡಂಬರವಿರಲಿಲ್ಲ. (ನನ್ನ ಮಗನಿಗೂ, ಮಗಳಿಗೂ ಐ.ಪಿ.ಎಸ್. ಮಾಡಿ, ತುಂಬಾ ಸುಲಭ ಅಂತ ತುಂಬಾ ಸಲ ಹೇಳಿದರು. ಆದರೆ ನನ್ನ ಮಕ್ಕಳು ಗೌರವದಿಂದ ಕೇಳಿಸಿಕೊಂಡರೇ ಹೊರತು ಅವರು ಹೇಳಿದ ಹಾಗೆ ಐ.ಪಿ.ಎಸ್. ಪರೀಕ್ಷೆ ಬರೆಯಲು ಸ್ವಲ್ಪವೂ ಅಭಿರುಚಿ ತೋರಲಿಲ್ಲ. ಈವಾಗ ಇಬ್ಬರೂ ತಮ್ಮ ತಮ್ಮ ಕಸುಬಿನಲ್ಲಿ ಚೆನ್ನಾಗಿದ್ದಾರೆ).

ಸರಿ. ಅವರೊಡನೆ ಸ್ವೀಡನ್ನಿನ ಸ್ಟಾಕ್ ಹೋಮಿಗೆ ಹೊರಟೆ. ಯಥಾಪ್ರಕಾರ ಏರ್‌ಪೋರ್ಟಿನಲ್ಲಿ ನಮ್ಮ ಬ್ಯಾಗುಗಳನ್ನು ಎಕ್ಸ್‌ರೇ ಯಂತ್ರದ ಮೂಲಕ ಹಾಯಿಸಿದರು. ನನ್ನ ಗಂಟುಗಳಲ್ಲಿ ಏನೂ ತೊಂದರೆಯಾಗಲಿಲ್ಲ. ಆದರೆ ಸಿಂಗ್ ಅವರ ಬ್ಯಾಗನ್ನು ಮತ್ತೆ ಮತ್ತೆ ಹಾಕಿ ನೋಡಿ, 'ಸ್ವಲ್ಪ ಬಿಚ್ಚಿ ತೋರಿಸಿ' ಅಂದ ಪೋಲೀಸಿನವನು. ಇವರು ಬ್ಯಾಗ್ ಬಿಚ್ಚಿದರು. ಅದರಲ್ಲಿ ಒಂದು ಬಟ್ಟೆ ಗಂಟು. ಅದನ್ನೂ ಬಿಚ್ಚಿ ಅಂದ. ಬಿಚ್ಚಿದರೆ, ಬಿಚ್ಚಿದರೆ ಅದರಲ್ಲಿ ಏನಿತ್ತು ಗೊತ್ತೇ? ಚನ-ಗೂಡ್ ಅಂದರೆ, ಹುರಿಗಡಲೆ ಮತ್ತು ಬೆಲ್ಲದ ಮಿಕ್ಚರ್! ಇದೇನಿದು ಅಂದ ಜರ್ಮನ್ ಸಿಪಾಯಿ. ದಿಸ್ ಈಸ್ ದಿ ಎಮರ್‌ಜೆನ್ಸಿ ಫುಡ್ ಆಫ್ ದಿ ಜಾಟ್ಸ್ ಅಂದರು ನಮ್ಮ ಯಜಮಾನರು. ಏನು ಹೇಳುತ್ತಿದ್ದೀರಿ, ಏನಿದು? ಎಂದು ಮತ್ತೆ ಕೇಳಿದ ಸಿಪಾಯಿ. ನನಗೆ ಬರುತ್ತಿದ್ದ ಜರ್ಮನಿಯಲ್ಲಿ ಅವನಿಗೆ ತಿಳಿಯ ಹೇಳಿದೆ: ಉತ್ತರ ಭಾರತದಲ್ಲಿ ಹಳ್ಳಿಯ ಜನ ಮನೆಯಿಂದ ಹೊರಗೆ ಬಂದರೆ ಈ ಪ್ರೋಟೀನು ಮತ್ತು ಈ ಹೈ ಕ್ಯಾಲೋರಿ ಪದಾರ್ಥ ಜತೆಗೆ ಕೊಂಡೇ ಹೋಗುತ್ತಾರೆ, ಹೀಗಾಗಿ, ಎಲ್ಲಿ ಆಹಾರದ ಸಮಸ್ಯೆಯಾದರೂ ಇವನ್ನು ತಿಂದು ಹಸಿವು ನೀಗಿಸಿಕೊಳ್ಳುತ್ತಾರೆ. ಅವನಿಗೆ ಅಷ್ಟು ಭರವಸೆ ಬರಲಿಲ್ಲ, ಅಂದಿನ ವರುಷಗಳಲ್ಲಿ ಭಾರತದಿಂದ ಜರ್ಮನಿಗೆ ಹೋಗುತ್ತಿದ್ದವರು ಕೇವಲ ಶರಣಾರ್ಥಿಗಳು (ಅಸೈಲಂ ಸೀಕರ್ಸ್). ಭಾರತ ಸರಕಾರ ನಮಗೆ ಕೊಲ್ಲುತ್ತದೆ ಎಂದು ಹೇಳಿದರೆ, ಜರ್ಮನಿಯ ಕಾನೂನಿನ ಪ್ರಕಾರ ಶರಣು ಕೊಟ್ಟು, ಹೊಟ್ಟೆ, ಬಟ್ಟೆ ಬರೆಗೆ ದುಡ್ಡೂ ಕೊಡುತ್ತಿದ್ದರು. ಇಂದಿನ ದಿನಗಳಂತೆ, ಭಾರತೀಯರೆಂದರೆ ಸಾಫ್ಟ್‌ವೇರ್ ಎಂಜಿನಿಯರುಗಳು ಎಂದು ಗೌರವ ಮಾಡುವ ಹಾಗೆ ಆಗ ಇರಲಿಲ್ಲ, 'ಇಂಡರ್ಸ್' (ಇಂಡಿಯನ್ಸ್) ಎಂದು ಹೇಳಿ ಮುಂದೆ ಹೋಗಲು ಹೇಳಿದ. ಸ್ಟಾಕ್ ಹೋಮಿನಲ್ಲಿ ನಮ್ಮ ದೂತಾವಾಸದಿಂದ ಒಂದು ಸುಂದರ ವಾಲ್ವೊ ಕಾರು ಬಂದಿತ್ತು. ಕಾರು ಹೊರಟೊಡನೆ, ಈಟ್ ಎಂದು ಹೇಳುತ್ತಾ ಡ್ಯಾಶ್ ಬೋರ್ಡಿನ ಮೇಲೆ ಒಂದು ಹಿಡಿ ಚನ-ಗೂಡ್ ಹಾಕಿದರು. ಆ ಸ್ವೀಡ ಭಯಬಿದ್ದವನಂತೆ ಸ್ವಲ್ಪ ಹಿಂದೆ ಹೋದ, ನಂತರ (ಪಾಪ, ಅರ್ಥವಾಗಿರಲಿಲ್ಲವಲ್ಲ) ಕಣ್ಣು ಕಣ್ಣು ಬಿಡುತ್ತಿದ್ದ. ನಾನು ನಿಧಾನವಾಗಿ ಇಂಗ್ಲೀಷಿನಲ್ಲಿ ಹೇಳಿದೆ (ಸ್ವೀಡನ್ನಿನಲ್ಲಿ ಫ್ರಾಂಸಿನಲ್ಲಿರುವಂತೆ ಇಂಗ್ಲೀಷು ಮಾತನಾಡಲು ಹಿಂಜರಿಯುವುದಿಲ್ಲ: ಇಟ್ ಈಸ್ ಬೀಯಿಂಗ್ ಆಫರ್ಡ್ ಇನ್ ಫ್ರೆಂಡ್‌ಶಿಪ್, ಇಟ್ ಈಸ್ ಪ್ಯೂರ್ ವೆಜಿಟೇರಿಯನ್ ಸ್ಟಫ್, ಈಟ್ ಎ ಫ್ಯೂ ಎಟ್ ಲೀಸ್ಟ್. ಪಾಪ ಸ್ವಲ್ಪ ಬಾಯಿಗೆ ಹಾಕಿಕೊಂಡ. ಮಾರನೆಯ ಬೆಳಿಗ್ಗೆ, ಹೋಟಲ್‌ನಲ್ಲಿ (ನಾವಿದ್ದದ್ದು ಒಂದು ರೂಮು ಬಿಟ್ಟು ಎದುರು ಬದುರು) ನನ್ನ ರೂಮಿಗೆ ಶ್ರೀ ಸಿಂಗ್ ಬಂದರು. ಒಂದು ಇಸ್ತ್ರಿ ಮಾಡಿ ಮಡಿಸಿದ್ದ ಯಾವುದೋ ಬಟ್ಟೆ ಅವರ ಕೈಯ್ಯಲ್ಲಿತ್ತು. ಅದನ್ನ ಬಿಚ್ಚಿದರು ಒಗೆದು,

ಗಂಜಿ ಹಾಕಿ ಇಸ್ತ್ರಿ ಮಾಡಿದ ಅವರ ಪೇಟ! ಅದನ್ನ ಬಿಚ್ಚಿ, ಅಗಲದ ಸೈಡ್ ಸರಿಯಾಗಿ ಮಡಿಚಿ, ಅವರ ರೂಮಿನ ಒಂದು ಮೂಲೆಯಿಂದ ನನ್ನ ರೂಮಿನ ಮೂಲೆಯ ತನಕ, ಹರಡಿದರು. ಮಧ್ಯದಲ್ಲಿ ಕಾರಿಡಾರು! ಬೆಳಗಿನ ಝಾವ ಕಾರಿಡಾರಿನಲ್ಲಿ ಹೋಗಿ ಬರುವವರ ಓಡಾಟ ಬೇರೆ! ಮಗುವಿನಂಥ ನಮ್ಮ ಸಿಂಗರಿಗೆ ಸ್ವಲ್ಪವೂ ಇದರ ಸೂಕ್ಷ್ಮ ತಿಳಿಯಲಿಲ್ಲ.

ಇನ್ನೊಮ್ಮೆ ನಮ್ಮ ಮನೆಯಲ್ಲಿ ಯಾವುದೋ ದೊಡ್ಡ ಪಾರ್ಟಿ ನಡೀತಿತ್ತು. ಎಲ್ಲಾರೂ ಗುಂಡು ಹಾಕುತ್ತಾ, ಮೆಲುಕುತ್ತಾ, ಮಜಾ ಮಾಡುತ್ತಿದ್ದರು (ಇಲ್ಲಿ ನನ್ನ ಒಂದು ಸ್ವಂತ ವಿಷಯ ಹೇಳಲು ದಯವಿಟ್ಟು ಅನುಮತಿ ಕೊಡಿ: ನನ್ನ ಶ್ರೀಮತಿ ಇಂದು ಜೀವನದಲ್ಲಿ ಎಂದೂ ಒಂದು ಮೊಟ್ಟೆಯನ್ನೂ ತಿನ್ನದ ಮುತ್ತೈದೆ. ಆದರೆ, ಬಟರ್ ಚಿಕ್ಕನ್ ಮಾಡುವ ಸೀಕ್ರೆಟ್ ಕಲಿತಿದ್ದರು. ಇಂಥಹ ಪಾರ್ಟಿಗಳಿಗೆ ಮುಂಚೆ ನಾವು ಮೆಟ್ರೊ ಎಂಬ ಅಂಗಡಿಗೆ (ನನಗೆ ಮೆಂಬರ್‌ಷಿಪ್ ಸಿಕ್ಕಿತ್ತು) ಹೋಗಿ ನೂರಿಪ್ಪತ್ತು ಕೋಳಿ ಕಾಲುಗಳನ್ನು ತರುತ್ತಿದ್ದೆವು. ಅವರು ಮಾಡಿದ ಬಟರ್ ಚಿಕ್ಕನ್ ಬಂದವರೆಲ್ಲ ಬೆರಳು ನೆಕ್ಕಿಕೊಂಡು, ಚಪ್ಪರಿಸಿ ತಿನ್ನುತ್ತಿದ್ದರು).

ಹೀಗೆ ಪಾರ್ಟಿ ನಡೆಯುತ್ತಿದ್ದಾಗ, ನಮ್ಮ ಕಾನ್ಸಲ್ ಜನರಲ್ ಗುಪ್ತ ಅವರು ಏರ್‌ಪೋರ್ಟಿನಿಂದ ಒಬ್ಬ ಅತಿಥಿಯನ್ನು ಕರೆತಂದರು. ಅವರು ಯಾರು ಅಂತೀರಿ? ಕರ್ನಾಟಕದ ರಾಜ್ಯಪಾಲರಾದ ಶ್ರೀ ಖುರ್ಶೀದ್ ಆಲಂ ಖಾನರು. ಆಸೀನರಾದ ಸ್ವಲ್ಪ ಸಮಯದ ನಂತರ ಅವರನ್ನು ಕೇಳಿದೆ. ಸರ್, ವ್ಹಾಟ್ ವಿಲ್ ಯು ಹ್ಯಾವ್. ಅವರ ಉತ್ತರ: ಐ ಎಲ್ ಹಾವ್ ಎ ಬಾತ್. ಅವರು ನಿಜಕ್ಕೂ ಸ್ನಾನಕ್ಕೆ ಹೋದರು. (ಅವರು ಟೀಟೋಲ್ಲರಂತೆ: ಟೋಟಲ್ಲಿ ಆನ್ ಟೀ ಓನ್ಲಿ!).

ಪಶ್ಚಿಮ ಯೂರೋಪಿನಲ್ಲಿ ಜರ್ಮನಿ, ನೆದರ್ ಲಾಂಡ್ಸ್, ಡೆನ್ಮಾರ್ಕ್ - ಈ ದೇಶಗಳಲ್ಲಿ ಸೆಕ್ಸ್ ಒಂದು ದೊಡ್ಡ ಉದ್ಯೋಗ ಹಾಗೂ ಓಪನ್ನಾಗಿ, ರಾಜಾರೋಷವಾಗಿ ನಡೆಯುತ್ತದೆ. ಇದಕ್ಕೆ ಅಲ್ಲಿನ ಸರಕಾರಗಳು ಲೈಸನ್ಸುಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತವೆ. ಹೀಗಾಗಿ ನಮ್ಮ ಭಾರತದೇಶದಿಂದ ಬರುವ ಎಲ್ಲರಿಗೂ ಈ ವಿಷಯದಲ್ಲಿ ತುಂಬ ಕುತೂಹಲ. ಅದೆಲ್ಲ ನೋಡಬೇಕೆಂಬ ತೀವ್ರ ಆಸೆ, ಬಾಯಿಬಿಟ್ಟು ಕೇಳಲು ನಾಚಿಕೆ, ಬಿಗುಮಾನ. ನನಗೆ ಅವರ ಇಚ್ಛೆ ತಿಳಿದಿದ್ದರೂ ಅವರೇ ಮುಂಚೆ ಬಾಯಿ ಬಿಡಲಿ ಎಂದು ಕಾಯುತ್ತಿದ್ದೆ. ಒಮ್ಮೆ ಒಬ್ಬ ಅತಿ ಉನ್ನತ ಅಧಿಕಾರಿಯೊಬ್ಬರ ಪತ್ನಿ ಕೇವಲ ಒಂದು ದಿನಕ್ಕಾಗಿ ನಮ್ಮೂರಿಗೆ ಬಂದಿದ್ದರು. ಏರ್ಪೋರ್ಟಿನಲ್ಲೇ ಧೈರ್ಯವಾಗಿ ನನಗೆ ಹೇಳಿದರು. ಇಂದು ಸಂಜೆಯೇ ನಾನು ಹೊರಟು ಹೋಗಬೇಕು ಆದರೆ ಹೋಗುವ ಮುನ್ನ ಸೆಕ್ಸ್ ಸಿನೆಮಾ ದೊಡ್ಡ ಸ್ಕ್ರೀನಿನಲ್ಲಿ ನೋಡಬೇಕು. ಸರಿ ಎಂದು ಹೊರ ಹೊರಟೆವು. ದುರದೃಷ್ಟವಶಾತ್ ಅಂದು 'ಫಾಶಿಂಗ್' ಎಂಬ ಒಂದು ಜರ್ಮನ್ ಹಬ್ಬ. ಎಲ್ಲರೂ ಬಣ್ಣ ಬಣ್ಣದ ವೇಶ ತೊಟ್ಟು ರಸ್ತೆಯಲ್ಲೆಲ್ಲಾ ಕುಡಿಯುತ್ತಾ, ಕುಣಿಯುತ್ತಾ ಇರುತ್ತಾರೆ. ಪಾಪ ನಮ್ಮ ಡೆಲ್ಲಿಯಿಂದ ಬಂದ ಮುತ್ತೈದೆಗೆ ತನ್ನ ಆಸೆ ಪೂರ್ತಿ ಮಾಡಲಾಗಲಿಲ್ಲ. ಇನ್ನೊಮ್ಮೆ, ನಮ್ಮ ಘನ ಭಾರತ ಸರ್ಕಾರದ ಕಾಬಿನೆಟ್ ಮಂತ್ರಿಯೊಬ್ಬರು ದಿನವೆಲ್ಲ ನಮ್ಮ ಮನೆಯಲ್ಲೇ ಕಳೆದರು.

ಅವರೂ ಬಿಳಿ ದ್ರಾಕ್ಷಿ ರಸ ಇದ್ದರೆ ಕುಡಿಯುತ್ತೇನೆ ಅಂದರು. ನಮ್ಮನೆಯಲ್ಲಿ ಎಲ್ಲಾ ಹಣ್ಣುಗಳ ರಸವೂ ಇರುತ್ತಿತ್ತು. ಹಾಗೆಂದುಕೊಂಡು ಗ್ರೇಪ್ ಜೂಸ್ ಕೊಟ್ಟೆ. ಆಗ ಜತೆಗಿದ್ದ ಅವರ ಸೈಡ್ ಕಿಕ್ ನನಗೆ ಪಿಸುಗುಟ್ಟಿದ. ಸಾಹೇಬರು ಕೇಳುತ್ತಿರೋದು ವೈಟ್ ವೈನ್ ಗ್ರೇಪ್ ಜೂಸ್ ಅಲ್ಲ. ಈ ವಿಧವಾದ ಹಿಪೋಕ್ರಸಿ, ಆಷಾಢಭೂತಿತನ ನಮ್ಮ ದೇಶದ ಒಂದು ಟ್ರೇಡ್ ಮಾರ್ಕ್ ಅನ್ನೋತರಹ ಪದೇ ಪದೇ ಅನುಭವ ಆಗಿ ಸಂಕಟ ಆಗುತ್ತಿತ್ತು. ನಂತರ ಯಜಮಾನರನ್ನು ಒಂದು ದೊಡ್ಡ ಅಂಗಡಿ ಬೀದೀಗೆ ಕರೆದೊಯ್ದೆ. ಅಲ್ಲಿ ಒಂದು ಸೆಕ್ಸ್ ಶೋ ಇದ್ದ ಎಡೆಯಲ್ಲಿ ಒಂದು ಸ್ಪೆಶಲ್ ಕೋಣೆಯಲ್ಲಿ ಕುಳಿತು ಆದದ್ದೆಲ್ಲ ನೋಡಿ ಬಂದರು. ಹೊರಗೆ ಬಂದಾಗ ಯಜಮಾನರ ಮುಖ ನಮಗೆಲ್ಲ ಪರಿಚಯ ಇರುವ ಟೆನ್ಷನ್ನಿಂದ ಕೂಡಿತ್ತು. ಒಂದೆರಡು ನಿಮಿಷಗಳು ಬಿಟ್ಟು ನಮ್ಮ ಮಹಾ ದೇಶದ ನೇತಾಜಿಯವರ ಅಂಬೋಣ. ಛೆ, ಏನಿದೆಲ್ಲ ಹೀಗೆಲ್ಲ ಆದರೆ ದೇಶದ ಜನರಲ್ಲಿ ಮೊರಾಲಿಟಿ ಉಳಿಯುತ್ಯೇ, ನಮ್ಮ ದೇಶದಲ್ಲಿ ಹೀಗೆಲ್ಲ ಇದೆಯೆ? ನನ್ನ ಮನಸಿನಲ್ಲಿ ಆಗ ಬಂದ ವಿಚಾರಗಳನ್ನ ಅವರಿಗೂ ಹೇಳಲಿಲ್ಲ, ನಮ್ಮ ಅಪರಂಜಿಯಲ್ಲಿ ಪ್ರಕಟಿಸುವ ಹಾಗೂ ಇಲ್ಲ!

ಇನ್ನೊಮ್ಮೆ ಬಿಹಾರಿನಿಂದ ಒಬ್ಬ ಐಎಎಸ್ ಅಧಿಕಾರಿ ಬಂದಿದ್ದ. ಯಾವುದೋ ಬಿಹಾರ್ ಸ್ಟೇಟ್ ಕಾರ್ಪೊರೇಷನ್ನಿನ ಎಂ.ಡಿ. ಆಗಿದ್ದ. ಅವನು ಹೇಳಿದ ಮಾತು: ತನ್ನ ಟ್ರಾನ್ಸ್ಫರಿಗೆ ಪ್ರಯತ್ನ ಮಾಡುತ್ತಿದ್ದನಂತೆ. ಅವನ ಅಂಬೋಣ: ಬಿಹಾರಿನಲ್ಲೇ ಸಿಕ್ಕಿದರೆ, ತಿಂಗಳಿಗೆ ಹತ್ತು ಲಕ್ಷ ಸಂಪಾದಿಸುತ್ತೇನೆ, ಆದರೆ ನಾನು ಕೇಳಿರುವ ಡೆಲ್ಲಿಯ ಕಾಮರ್ಸ್ ಮಂತ್ರಾಲಯದಲ್ಲಿ ಸಿಕ್ಕಿದರೆ ಸುಗ್ಗಿ. ದಿನಕ್ಕೆ ಎರಡು ಮೂರು ಲಕ್ಷವಾದರೂ ಮಾಡುತ್ತೇನೆ. 'ಸಾರೇ ಜಹಾನ್ ಸೆ ಅಚ್ಛ, ಹಿಂದುಸ್ತಾನ್ ಹಮಾರ!'.

ನನ್ನ ಶ್ರೀಮತಿ ಇಂದು ಅವರು ಆಲ್ ಇಂಡಿಯ ರೇಡಿಯೋದಲ್ಲಿ ಪರ್ಮನೆಂಟ್ ಕೆಲಸದಲ್ಲಿದ್ದರು. ಐದು ವರ್ಷಗಳ ರಜೆಯನ್ನು ಫಾರ್ಮಲ್ ಆಗಿ ಪಡೆದು ಜರ್ಮನಿಗೆ ಬಂದಿದ್ದರು. ಒಮ್ಮೆ ಡೆಲ್ಲಿಯಿಂದ ಬಂದ ತುಂಬಾ ಹಿರಿಯ ಅಧಿಕಾರಿಯೊಬ್ಬರಿಗೆ, ಇಂದು ಅವರ ರಜದ ಬಗ್ಗೆ ಇನ್ಫರ್ಮೇಷನ್ ಅಂಡ್ ಬ್ರಾಡ್ಕಾಸ್ಟಿಂಗ್ ಮಂತ್ರಾಲಯದಲ್ಲಿ ವಿಚಾರಿಸಿ ಎಂದು ಕೇಳಿಕೊಂಡೆವು. ಅವರು ಡೆಲ್ಲಿಯಿಂದ ಫೋನಿನಲ್ಲಿ ಹೇಳಿದ್ದು ಜೋರಾಗೇ ಷಾಕ್ ಕೊಡ್ತು. ಇಂದು ಅವರಿಗೆ ರಜೆ ಸಾಂಕ್ಷನ್ ಮಾಡಿದ ಪ್ರತಿಯೇ ಆಫೀಸಿನಲ್ಲಿ ಇಲ್ಲವೆಂದೂ, ಶಿ ಈಸ್ ಆಬ್ಸ್ಕಾಂಡಿಂಗ್ ಎಂದು ಬರೆದಿದ್ದಾರೆ ಎಂದೂ ಹೇಳಿದರು. ಸಧ್ಯ, ಅವರು ಇಂದು ಅವರ ಹತ್ತಿರ ಇದ್ದ ಪತ್ರದ ಪ್ರತಿಯನ್ನು ನೋಡಿ ಹೋಗಿದ್ದರಿಂದ ಐ ಎಂಡ್ ಬಿ ಮಂತ್ರಾಲಯದ ಹಿರಿಯ ಅಧಿಕಾರಿಗಳೊಡನೆ ಮಾತನಾಡಿ ಹೇಳಿ ಪರಿಸ್ಥಿತಿ ಸುಧಾರಿಸಿದರಂತೆ! ಅವರು ಬಂದಿಲ್ಲದಿದ್ದರೆ ಇಂದು ಅವರ ಆಫೀಸ್ ಕ್ಯಾರಿಯರಿನ ಗತಿ!

ಹೀಗೆಯೇ ಜರ್ಮನಿಯಲ್ಲಿದ್ದಾಗ ಸರ್ವಶ್ರೀ ಶಿವರಾಜ್ ಪಾಟಿಲ್, ನಾರಾಯಣ ದತ್ತ ತಿವಾರಿ, ಸೀತರಾಮ ಕೇಸರಿ ಇತ್ಯಾದಿಯಾಗಿ ಅನೇಕ ನಾಯಕರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಆದರೆ, ಬೈ ದಿ ವೇ, ಅವರು ಮರಳಿ ಹೋದ ನಂತರ ಒಮ್ಮೆಯೂ,

ಒಬ್ಬರನ್ನೂ ಭೇಟಿ ಮಾಡಲು ಹೋಗಲಿಲ್ಲ, ಅದು ಬೇಕು ಇದು ಬೇಕು ಎಂದು ಕೇಳಲಿಲ್ಲ. ಹೀಗೆ ಹೇಳಿ ಜಂಭ ಹೊಡೆಯಬೇಕೆಂದಲ್ಲ. ಗುರುತು ಹೇಳಿ ಹೋಗಿ ಹಲ್ಲು ಕಿರಿದಿದ್ದರೆ ನನಗೆ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದಿತ್ತು. ಆದರೆ ಒಂದು ತಿಳಿದಿತ್ತು, ಸಾಧಾರಣವಾಗಿ ಅಧಿಕಾರ ಎಷ್ಟು ಹಿರಿಯದೋ, ಅಧಿಕಾರಿ ಅಷ್ಟು ಸಣ್ಣವನಾಗಿರುತ್ತಾನೆ ಎಂಬುದು ನನ್ನ ಅನುಭವ!

ಚಿಕನ್ ಸೂಪ್ ಕತೆಗಳು

ಮರೆತಿದ್ದೆ...!

ಅರವತ್ತು ವರ್ಷದ ಆ ಅಜ್ಜಿ ನಮಗೆಲ್ಲಾ ತುಂಬಾ ಚಿರಪರಿಚಿತರು. ಯಾವಾಗಲೂ ಅತಿ ಚಟುವಟಿಕೆಯಿಂದ ಓಡಾಡುತ್ತಾ ಜೀವನದ ಎಲ್ಲ ರಸ ಘಳಿಗೆಗಳನ್ನೂ ಅನುಭವಿಸುತ್ತಾ ಎಲ್ಲರಿಗೂ ಉತ್ಸಾಹ ತುಂಬುತ್ತಿದ್ದ ವ್ಯಕ್ತಿ. ಇಂತಹ ಉತ್ಸಾಹದ ಚಟುವಟಿಕೆಯ ವ್ಯಕ್ತಿಯನ್ನು ಕಂಡರೆ ನಮಗೆಲ್ಲರಿಗೂ ಒಂದು ರೀತಿಯ ಪ್ರೀತಿ ಮತ್ತು ಅಭಿಮಾನ.

ಈ ಅಜ್ಜಿಗೆ ಅರವತ್ತು ತುಂಬಿದಾಗ ಒಂದು ಡಿನ್ನರ್ ಏರ್ಪಡಿಸಿದ್ದೆವು. ಅಜ್ಜಿ ಈಗ ಹೆಚ್ಚೂಕಮ್ಮಿ ಒಬ್ಬಂಟಿಯಾಗಿದ್ದಳು ಮತ್ತು ಅವಳ ಒಂಟಿತನವನ್ನು ದೂರಮಾಡಲು ಮನೆಯಲ್ಲಿ ಎಲ್ಲರೂ ಆದಷ್ಟು ಯತ್ನಿಸುತ್ತಾ ಇದ್ದೆವು. ಡಿನ್ನರ್ ಪಾರ್ಟಿಗೆ ಎಲ್ಲರೂ ಸೇರಿದ್ದೆವು. ಅಜ್ಜಿ ನಮ್ಮ ಕೇಂದ್ರ ಬಿಂದುವಾಗಿ ಲವಲವಿಕೆಯಿಂದ ಎಲ್ಲರನ್ನೂ ತಮಾಷೆ ಮಾಡುತ್ತಾ ಕುಳಿತಿತ್ತು. ಅಜ್ಜಿ ಎದುರು ಅಜ್ಜಿಗಿಂತಲೂ ಸುಮಾರು ನಾಲ್ಕೈದು ವರ್ಷ ಹಿರಿಯ ಎನ್ನಬಹುದಾದ ಅಜ್ಜ ಸಪ್ಪಗೆ ಕುಳಿತು ಊಟ ಮಾಡುತ್ತಿದ್ದರು. ಪಾರ್ಟಿ ಮುಗಿಯುತ್ತಾ ಬಂದಂತೆ ಅಜ್ಜಿ ಈ ಅಜ್ಜನ ಬಳಿ ಸರಿಯಿತು. ನಿಮ್ಮನ್ನು ಎಲ್ಲೋ ನೋಡಿದ ನೆನಪು ನನಗೆ. ಅಂದ ಹಾಗೆ ನೀವು ನನ್ನ ಡೈವೋರ್ಸ್ ಆದ ಐದನೇ ಗಂಡ ಅಲ್ಲ ತಾನೇ....?

ಅಜ್ಜನ ಮುಖದಲ್ಲಿ ಒಂದು ರೀತಿಯ ಕಸಿವಿಸಿ ಕಾಣಿಸಿತು. ಸಾರೀ. ಅದು ನಾನಲ್ಲ. ನೀವು ತಪ್ಪು ತಿಳಿಯೋಲ್ಲ ಅನ್ನುವ ಹಾಗಿದ್ದರೆ ನಿಮ್ಮನ್ನ ಒಂದು ಪ್ರಶ್ನೆ ಕೇಳಬಹುದೇ?

ಓ ಯಸ್, ಕೇಳಿ ಅದಕ್ಕೇನಂತೆ... ಅಜ್ಜಿ ಉತ್ತರಿಸಿದಳು.

ಅಂದ ಹಾಗೆ ನೀವು ಎಷ್ಟು ಬಾರಿ ಡೈವೋರ್ಸ್ ಮಾಡಿದೀರಿ ನಿಮ್ಮ ಹಸ್ಬೆಂಡ್ಸನ್ನಾ...?

ಓಹ್, ಅದಾ ಬರೀ ನಾಲ್ಕು ಬಾರಿ ಮಾತ್ರಾ...

ಒಂದೆರಡು ವಾರದಲ್ಲಿ ಈ ಅಜ್ಜ ಆ ಅಜ್ಜಿಯ ಐದನೇ ಗಂಡನಾಗಿದ್ದ...!

– ಎಚ್. ಗೋಪಾಲಕೃಷ್ಣ

ಹುಟ್ಟಿದ ಹಬ್ಬ

- ಗೋಪಾಲಿ

ಈ ಸಲ ನಿನ್ನ ಹುಟ್ಟಿದ ಹಬ್ಬಕ್ಕೆ ಏನು ಕೊಡಿಸ್ತೀಯಾ ಅಣ್ಣಾ... ಅಂತ ಚಿಕ್ಕದು ಕೇಳಿತು. ಒಂದು ಕ್ಷಣ ಚಂಚಲ ಚಿತ್ತನಾಗಿಬಿಟ್ಟೆ! ಚಂಚಲಚಿತ್ತ ಅಂದರೆ ಏನಯ್ಯಾ ಅದೇನೇನೋ ಹೊಸಾ ಹೊಸಾ ಪದಗಳನ್ನು ಹುಡುಕಿ ನಮ್ಮ ತಲೆ ಯಾಕೆ ತಿಂತೀಯಾ ನೀನು ಬೇರೆ... ಅಂತ ನೀವು ಕೇಳ್ತೀರಿ ಅಂತ ಗೊತ್ತು. ಚಂಚಲ ಚಿತ್ತ ಅಂದರೆ ಸಾರ್ ನನಗೂ ಸಹ ಖಂಡಿತವಾಗಿಯೂ ದೇವರ ಆಣೆಯಾಗಿಯೂ ತಿಳೀದು, ಆದರೆ ಮೊನ್ನೆ ಸಂಪುಟ ವಿಸ್ತರಣೆಯಾದಾಗ ಕೆಲವರು ಅಲ್ಲೇ ಎಲ್ಲೋ ಬಚ್ಚಿಟ್ಟುಕೊಂಡು ಸಮಸ್ಯೆ ಪರಿಹಾರಕ್ಕೆ ಮಾರ್ಗ ಕಂಡುಹಿಡೀತಿದ್ದರು ನೋಡೀ ಅವಾಗಿನ ಮನಃಸ್ಥಿತಿಗೆ ಚಂಚಲ ಚಿತ್ತ ಅಂತ ಹೇಳುವರಂತೆ - ಹೀಗಂತ ಪರಮಾರ್ಥಿಕ ಚಿಂತೆಗಳಲ್ಲಿ ತಮ್ಮ ಇಡೀ ಜೀವನವನ್ನೇ ಮನೆ ಮಠ ಮರೆತು ಸವೆಸಿರುವ ನಮ್ಮ ಆಪ್ತರೊಬ್ಬರು ವಿವರಣೆ ನೀಡುತ್ತಾರೆ. ಅವರು ತುಂಬಾ ಅನುಪದ್ರವಿ ಆಗಿರುವುದರಿಂದಲೂ ಮತ್ತು ಅವರ ಅರ್ಥೈಸಿಕೆಯಿಂದ ಯಾರಿಗೂ ಯಾವ ರೀತಿಯ ಲಾಭವಾಗಲೀ ನಷ್ಟವಾಗಲೀ ಸಂಭವಿಸುವ ಕಾರಣವಿಲ್ಲದಿರುವುದರಿಂದ ಈ ಅರ್ಥವನ್ನು ನಂಬಬಹುದು ಎಂದು ನಾನು ತಿಳಿದಿದ್ದೇನೆ. ಈಗ ಮತ್ತೆ ಟ್ರ್ಯಾಕಿಗೆ...?

ಹುಟ್ಟಿದ ಹಬ್ಬ ಅಂದಕೂಡಲೇ ನನಗೆ ಒಂದು ರೀತಿಯ ಮೈನಡುಕ ಆರಂಭವಾಗುತ್ತೆ. ಹುಟ್ಟುಹಬ್ಬ ಅಂದರೆ ಮೈನಡುಕ ಯಾಕೆ ಅಂತ ನಿಮಗನ್ನಿಸಬಹುದು. ಹೋದ ಸಲ ನಮ್ಮ ರಾಜಕಾರಣಿಯೊಬ್ಬನ ಹುಟ್ಟುಹಬ್ಬ ಆಯಿತೂ ನೋಡೀ ಆಗ ನಾನೂ ಅದಕ್ಕೆ ಹೋಗಿದ್ದೆ - ಅಲ್ಲಿ ಬಡವರಿಗೆ ಸೀರೆ ಪಂಚೆ ಪ್ಯಾಂಟು ಶರಟು ಕೊಡ್ತಾರೆ ಬಾರಯ್ಯಾ ನೀನೂನು ಅಂತ ನನ್ನನ್ನ ಸದರಿ ರಾಜಕೀಯ ಪಕ್ಷದ ಪ್ರಭಾವೀ ಸದಸ್ಯರೊಬ್ಬರು ಆಹ್ವಾನಿಸಿದ್ದರು. ನಾನೆಂಥ ಬಡವನಯ್ಯಾ ತಿಂಗಳಿಗೆ ಆರ್ನೂರಾ ಹನ್ನೆರಡು ಬರುತ್ತೆ ನನಗೆ ಅಂತ ಕೇಳಿದ್ದೆ. ಆತ ಮೈ ತುಂಬಾ ನಕ್ಕಿದ್ದ. ಅಲ್ಲಿ ಜನರನ್ನ ಸೇರಿಸಬೇಕು ಬಡವರೇ ಆಗಬೇಕೂಂತಲ್ಲಾ, ಹಾಗೆ ನೋಡಿದರೆ ಬಡತನ ಅನ್ನೋದೂ ಒಂದು ರೀತಿಯ ಮಾನಸಿಕ ಸ್ಥಿತಿ ನಾನು ಬಡವ ಅಂತ ಅಂದುಕೊಂಡರೇನೇ ನಾವು ಬಡವರು ಅಷ್ಟೇ ನಾವು ಸಾಹುಕಾರರು ಅಂತ ಅಂದುಕೊಂಡರೆ ನಾವು ಸಾಹುಕಾರರು... ಅಂತ ಮತ್ತೆ ಆತ ನಕ್ಕಿದ್ದ!

ರಾಜಕೀಯದವರ ಹತ್ತಿರ ಮಾತು ಶುರು ಹಚ್ಚಿದರೆ ಮೆಂಟಲ್ ಆಗಿಬಿಡ್ತೀವೀ ಅಂತ ಗೊತ್ತಿತ್ತು, ಆದರೆ ಮಾತು ಆರಂಭವಾಗಿಬಿಟ್ಟಿತ್ತು. ಆತನ ಮಾತು ಪೂರ್ತಾ ಕೇಳಿಸಿಕೊಂಡು ನಂತರ ಅವನ ಜತೆಗೆ ಆ ಹುಟ್ಟಿದ ಹಬ್ಬಕ್ಕೆ ಹೋಗಿದ್ದೆ. ಹತ್ತು ಗಂಟೆ ಬಿಸಿಲಿನಲ್ಲಿ ಭಾಷಣ ಬಿಗಿದು ನಂತರ ಪಂಚೆ ಸೀರೆ ಕ್ಯೂ ಹತ್ತಿರಕ್ಕೆ ದೂಡಿದರು. ಸೀರೇನೋ ಪಂಚೇನೋ ಸಿಗೋದಿರಲಿ ಮೈಮೇಲಿನ ಬಟ್ಟೆ ಚೂರು ಚೂರು ಆಗಿಬಿಟ್ಟು ಅಲ್ಲೇ ಒಂಥರಾ ದೊಂಬಿಯಾಗಿಬಿಟ್ಟು ಪೋಲೀಸಿನವರು ಬಂದು ಲಾಠಿ ಬೀಸಿ ನಮ್ಮನ್ನ ಓಡಿಸಿದ್ದರು!

ಅವರು ಬೀಸಿದ ಲಾಠಿ ನನ್ನ ಬೆನ್ನಿನ ಮೇಲೆ ಬಾಸುಂಡೆ ಮೂಡಿಸಿ ಮೂರು ತಿಂಗಳು ಬೆನ್ನನ್ನ ಹೆಂಡತಿಗೂ ತೋರಿಸದೇ ಬರೀ ಬೋರಲು ಮಲಗಿ ಅನುಭವಿಸಿದ್ದೆ! ಇವನಿಗೇನೋ ಖಾಯಿಲೆ ಹತ್ತಿದೆ ಈಚೆಗೆ ಅಂಗಾತ ಮಲಗೋದೇ ನಿಲ್ಲಿಸಿಬಿಟ್ಟಿದಾನೆ ಅಂತ ನನ್ನ ಕಡೆ ನೆಂಟರ ಗುಂಪಿನಲ್ಲಿ ನನ್ನ ಮೇಲೆ ಒಂದು ರೀತಿಯ ಗುಮಾನಿ ಬೇರೆ ಶುರುವಾಗಿಬಿಟ್ಟಿತ್ತು. ಅದು ಹೇಗೋ ಆ ಸಂಕಷ್ಟದಿಂದ ಹೊರಗೆ ಬಂದೆ ಅನ್ನಿ ಅದನ್ನ ಮತ್ತೊಂದು ಸಲ ಹೇಳ್ತೀನಿ.

ಈಗ ಚಿಕ್ಕದು ಹುಟ್ಟಿದ ಹಬ್ಬದ ಉಡುಗೊರೆ ಕೇಳಿದಾಗ ಈ ಹಳೇ ನೆನಪುಗಳು ಮಂತ್ರಿ ಪದವಿ ಸಿಕ್ಕದೇ ಇರೋ ಮರಿ ಪುಢಾರಿ ತಲೆ ಯೋಚಿಸುವ ಹಾಗೆ... ಬೆಂಗಳೂರಿನಲ್ಲಿ ಒನ್‌ವೇನಲ್ಲಿ ಪರದಾಡುವ ಸ್ಕೂಟರುಗಳ ತರಹ ಆಗಬೇಕೇ?

ಹ್ಯೂಮನ್ಸ್ ಆರ್ ಮೇಡ್ ಆಫ್ ಸ್ಪ್ರಾಂಗ್ ಸ್ಟಫ್ಪು ಅಂತ ಕೇಳಿರಬೇಕು ನೀವು. ನಾನೂ ಸಹ ಸ್ಟ್ರಾಂಗ್ ಸ್ಟಫ್ಫೇ.

ಕಂ ಚೈಲ್ಡ್ ಅಂತ ಹತ್ತಿರಕ್ಕೆ ಕರೆದು ಕೂರಿಸಿಕೊಂಡೆ.

''ಮರೀ ನನ್ನ ಹುಟ್ಟಿದ ಹಬ್ಬ ಅಂತ ಜ್ಞಾಪಿಸಿಕೊಂಡೆಯಲ್ಲಾ ನೀನು ಅದಕ್ಕೆ ನಿನಗೆ ತುಂಬಾ ತ್ಯಾಂಕ್ಸ್...'' ಅಂತ ತಲೆ ಸವರಿದೆ.

''ನಾನಲ್ಲಾ ಅಣ್ಣ ಅಮ್ಮ ಜ್ಞಾಪಿಸಿಕೊಂಡಳು.''

''ಅಮ್ಮನೇ ಅದೇಕಂತೆ...?''

ನನ್ನ ಹುಟ್ಟಿದ ಹಬ್ಬ ನೆನೆಸಿಕೊಳ್ಳುವಂತಹ ದೊಡ್ಡ ಮನುಷ್ಯ ನಾನು ಯಾವಾಗ ಆದೆ ಅಂತ ಚಕಿತನಾಗಿದ್ದೆ. ಚಕಿತ ಅಂದರೆ ಆಶ್ಚರ್ಯ ಅಂತ ಗೊತ್ತು ತಾನೇ?

''ನಿನ್ನ ಹುಟ್ಟಿದ ಹಬ್ಬದ ತಿಂಗಳೇ ಅಮ್ಮ ಹಾಕಿರೋ ಚೀಟಿ ಮುಗಿಯುತ್ತಂತೆ...'' ಅಂತ ಮಗು ಒತ್ತು ಕೊಟ್ಟಿತು! ಸದ್ಯ ಈ ಕಾರಣಕ್ಕಾದರೂ ನನ್ನ ಹುಟ್ಟುಹಬ್ಬ ನೆನಪಿದೆ ಅಂತ ಸಂತೋಷವಾಯಿತು. ಸಂತೋಷ ಅಂದರೆ ನಿಮಗೆ ಗೊತ್ತಿರಬೇಕು- ಮೊನ್ನೆ ಹೊಸಾ ಮಂತ್ರಿಗಳು ಪ್ರಮಾಣವಚನ ಸ್ವೀಕರಿಸಿದ್ದನ್ನು ನೀವು ದೂರದರ್ಶನದಲ್ಲಿ ನೋಡಿದ್ದರೆ ಹೊಸಾ ಮಂತ್ರಿಗಳ ಮುಖದಲ್ಲಿ ಕಾಣಿಸುತ್ತಿದ್ದ ಮಿಂಚು ನಿಮ್ಮ ಗಮನಕ್ಕೆ ಬಂದಿರಬೇಕು- ಆ ರೀತಿಯ ಮಿಂಚಿನಲ್ಲಿ ಶೇಕಡಾ ಅರವತ್ತು ಕಳೆದರೆ ಅದೇ ನನ್ನಂಥವರು ಪಡುವ ಸಂತೋಷ! ಮಗು ನನ್ನ ಮುಖವೂ ಸಹ ಹೊಸಾ ಮಂತ್ರಿಗಳ ಮುಖದ ಹಾಗೆ ಅರಳಿದ್ದು ಗಮನಿಸಿತು.

''ಸರಿ ಅಣ್ಣಾ ಹುಟ್ಟಿದ ಹಬ್ಬಕ್ಕೆ ಏನು ಕೊಡಿಸ್ತೀ?'' ಅಂತ ಮತ್ತೆ ಟ್ರ್ಯಾಕಿಗೆ ನುಸುಳಬೇಕೇ? ನುಸುಳೋದು ಅಂದರೆ ಗೊತ್ತು ತಾನೇ? ಹೋದವಾರ ಮಾಜಿ ಪ್ರಧಾನಿಗಳ ಮನೆ ಒಳಗೆ ಜನ ಸರ್ ಸರ ಅಂತ ವೇಗವಾಗಿ ಯಾರಿಗೂ ತಿಳಿಯದ ಹಾಗೆ ಹೋಗುತ್ತಿದ್ದರು ನೋಡೀ ಅದಕ್ಕೇ ನುಸುಳೋದು ಅಂತ ಅರ್ಥ!

''ಏನು ಬೇಕು ಮರೀ? ಈ ಸಲ ಐವತ್ತು ಪ್ಲಸ್ ಐದು ರೂಪಾಯಿ ಮಿಗುತ್ತೆ ಅನಿಸುತ್ತೆ ನನ್ನ ಸಂಬಳದಲ್ಲಿ. ಇಪ್ಪತ್ತೈದು ರೂಪಾಯನ್ನ ಸೆಲೂನಿಗೆ ಕೊಡಬೇಕು ನಾನು ಕಟಿಂಗ್

ಮಾಡಿಸಿ ಆಗಲೇ ಆರು ತಿಂಗಳು ಆಯಿತು, ಮೂವತ್ತು ಮಿಗುತ್ತೆ, ಒಂದು ಪ್ಯಾಕೆಟ್ಟು ಬ್ಲೇಡು ತಗೋಬೇಕು ಇಪ್ಪತ್ತನಾಲ್ಕು ರೂಪಾಯಿ ಬ್ಲೇಡಿಗೆ ಹೋದರೆ ಆರು ರೂಪಾಯಿ ಮಿಗುತ್ತೆ... ಆರು ರೂಪಾಯಿ ಪೂರ್ತಾ ನೀನು ಏನು ಬೇಕಾದರೂ ಮಾಡಿಕೋಬಹುದು. ಏನು ತಗೋತೀಯಾ...'' ಅಂದೆ

ಮಗು ದೊಡ್ಡವರ ಮನೇಲಿ ಹುಟ್ಟಿದ್ದರೆ ಪಾಪ ಅವರಪ್ಪ ಅವನ ಹುಟ್ಟಿದ ಹಬ್ಬ ಮಾಡಿಕೊಂಡಾಗ ಊರಿಗೆಲ್ಲಾ ಊಟ ಹಾಕಿ ಬಡವರಿಗೆ ಸೀರೆ ಪಂಚೆ ಹಂಚಿ ಪೇಪರಿನಲ್ಲಿ ಹೆಂಡತಿ ಮಕ್ಕಳ ಜತೆ ಫೋಟೋ ಹಾಕಿಸಿಕೊಂಡು ಮಕ್ಕಳಿಗೆ ಖುಷಿ ಹಂಚುತ್ತಿದ್ದ. ಮಕ್ಕಳಿಗೆ ಕಾರೋ ಏರೋಪ್ಲೇನೋ ತಂದುಕೊಡ್ತಿದ್ದ, ಫೈವ್‌ಸ್ಟಾರ್ ಹೋಟಲಿನಲ್ಲಿ ಪಾರ್ಟಿ ಮಡಗುತ್ತಿದ್ದ... ನಾವೇನು ಮಾಡುಕ್ಕೆ ಆಗುತ್ತೆ ಅಂತ ಮನಸ್ಸು ಒಂದು ಕ್ಷಣ ಖಿನ್ನವಾಗಿತ್ತು. ಖಿನ್ನ ಅಂದರೆ ಏನೂ ಅಂತ ನಿಮಗೆ ಖಂಡಿತ ಗೊತ್ತಿದೆ, ಆದರಿಂದ ಅರ್ಥ ಹೇಳೋಲ್ಲ.

ಚಿಕ್ಕದು ಇನ್ನೂ ಒತ್ತಿಕೊಂಡು ನನ್ನ ಪಕ್ಕಕ್ಕೆ ಬಂತು. ತನ್ನ ಪುಟ್ಟ ಕೈಯಿಂದ ನನ್ನ ಕೆನ್ನೆ ಸವರಿತು, ತಲೆ ಕೂದಲು ಹಿಡಿದು ಎಳೀತು.

''ಆರು ರೂಪಾಯಿ ನನ್ ನನಗೇ ಕೊಡ್ತೀಯಾ?'' ಅಂತ ಕೇಳಿತು.

''ಹೌದು ಮರೀ ನಿನ್ ನಿನಗೇನೇ.... ಅದೇನು ಮಾಡ್ತೀಯಾ ಅದನ್ನು ತಗೊಂಡು?''

ಮಗು ಒಂದು ನಿಮಿಷ ಚಿಂತಿಸಿದ ಹಾಗೆ ಮಾಡಿತು.

''ಅಪ್ಪ ನಿನ್ನ ಹವಾಯಿ ಚಪ್ಪಲಿ ಕಿತ್ತು ಹೋಗಿದೆಯಲ್ಲಾ ಅದನ್ನ ಹೊಲಿಸಿ ಕೊಡ್ತೀನಿ...''

ಆ ಕ್ಷಣ ನನ್ನ ಮನಸ್ಸು ಹೇಗಾಯಿತು ಅಂತ ನಿಮಗೆ ಗೊತ್ತಾ ಇವರೇ...?

ಯಾವ ಮಹಾ ಚಕ್ರವರ್ತಿಗೆ ಇಂಥಾ ಮಕ್ಕಳು ಇವೆ ರೀ...?

ಓದುಗರ ಪತ್ರ

ಮಾನ್ಯರೆ,

ಅಪರಂಜಿಗೆ ಹೊಸ ಆಯಾಮ ಸಿಕ್ಕಿದೆ. ಜನಪ್ರಿಯ ನಗೆಗಾರರ ಇನ್ನಷ್ಟು ನಗೆ ಪ್ರಸಂಗಗಳನ್ನು ಪ್ರಕಟಿಸಿ. ಎರಡು ಸಂಚಿಕೆಗಳಲ್ಲಿ ಬಂದರೂ ಉಪಯುಕ್ತವೇ. ಈ ನಗೆಗಾರರನ್ನು ಇನ್ನೆಲ್ಲೋ ಓದುತ್ತೇವೆ ಅನ್ನೋದು ಆಗದ ಮಾತು. ದಯಮಾಡಿ ಅಪರಂಜಿ ಶಿವು ಅವರಿಗೆ ನನ್ನ ಪ್ರಾರ್ಥನೆ ಹಾಗೂ ನಮಸ್ಕಾರಗಳು.

ಶುಭಾಶಯಗಳೊಡನೆ,

ಜೆ.ಬಿ. ರಂಗಸ್ವಾಮಿ

ತುಮಕೂರು

ಗದ್ದುಗೆ ಪ್ರಕರಣ

- ಅಣ್ಣಾಸ್ವಾಮಿ ಮೊದಲಿಯಾರ್

'ಗದ್ದುಗೆ' ಎಂದರೆ, ಸಿಂಹಾಸನ, ಗುರುಪೀಠ, ಅಧಿಕಾರಿಗಳ ಕುರ್ಚಿ ಹೀಗೆ ವಾಡಿಕೆಯಲ್ಲಿ ಹಲವಾರು ರೀತಿಯಲ್ಲಿ ಜನಸಾಮಾನ್ಯರಾದ ನಾವು ಉಪಯೋಗಿಸುವುದನ್ನು ಕಾಣುತ್ತೇವೆ. 'ನಾನು ಗದ್ದುಗೆಗೆ ಬರ್ಲಿ ನೋಡ್ರಿ ಏನೇನ್ಮಾಡ್ತೀನಂತ ಗೊತ್ತಾ!' ಎಂದು ಉತ್ತರ ಕರ್ನಾಟಕದ ಶಾಸಕರೊಬ್ಬರು ಗುಡುಗಿದ್ದನ್ನು ನಾನು ಕೇಳಿದ್ದೇನೆ. ಇಲ್ಲಿ ಅವರ ಅರ್ಥದಲ್ಲಿ 'ಗದ್ದುಗೆ' ಅಂದರೆ ಮುಖ್ಯಮಂತ್ರಿ ಪದವಿ. 'ಗದ್ದುಗೆ ಮೇಲೆ ಕೂತರೆ ಆಗ್ಲಿಲ್ಲಾರೀ ರೈತರ ಹಿತಕ್ಕಾಗಿ ಏನ್ಮಾಡಿದ್ದೀರಿ ಅದು ಮುಖ್ಯ!' ಅಂತ ಡಿ.ಗೌಡರು ಆಗಾಗ್ಗೆ ಭಾಷಣ ಮಾಡಿದ್ದನ್ನು ಕೇಳಿದ್ದೇನೆ. ಒಟ್ಟಿನಲ್ಲಿ 'ಗದ್ದುಗೆ' ಅಂದರೆ ಒಂದು ಜವಾಬ್ದಾರಿಯುತವಾದ ತುಂಬ ಅಧಿಕಾರವಿರುವ ಪೀಠ ಎಂದು ಪಾಮರನಾದ ನಾನು ಅರ್ಥಮಾಡಿಕೊಂಡಿದ್ದೀನಿ.

'ಗದ್ದುಗೆ' ಸುಮ್ಮನೆ ದೊರಕೋಲ್ಲ, ದೊರಕಿದರೂ ತುಂಬ ದಿನ ಉಳಿಯೋಲ್ಲ; ಅದಕ್ಕಾಗಿ ಎಷ್ಟೊಂದು ಹೊಡೆದಾಟ-ಬಡಿದಾಟ-ಹೋರಾಟ-ಕೂಗಾಡ-ಅಲೆದಾಟ-ನೂಕಾಟ-ಎಳೆದಾಟ ಇನ್ನೂ ಏನೇನೋ ಆಟಗಳು ನಡೆಯುತ್ತಲೇ ಇರುತ್ತವೆ. ಇವನ್ನೆಲ್ಲಾ ಜಯಿಸಿ ಬಂದವನು 'ಗದ್ದುಗೆ' ಮೇಲೆ ಕೂರುತ್ತಾನೆ. ಕೂತರೇನು ನಿಶ್ಚಿಂತೆಯಾಗಿರಲು ಸಾಧ್ಯವೇ? ಖಂಡಿತ ಇಲ್ಲ! ಬಿಸಿ ತುಪ್ಪ ನುಂಗಿದ ಹಾಗೆ, ಬೆಂಕಿ ಮೇಲೆ ಕೂತ ಹಾಗೆ! ಆದರೂ, ಜನ 'ಗದ್ದುಗೆ'ಯೇರಲು ಹಂಬಲಿಸುತ್ತಲೇ, ಪ್ರಯತ್ನಿಸುತ್ತಲೇ ಇರುತ್ತಾರೆ. ಇದೇ 'ಗದ್ದುಗೆ'ಯ ಮರ್ಮ. ಅಗಾಧ ಆಕರ್ಷಣೆ. ರಾಜರ ಕಾಲದಲ್ಲಂತೂ ತಲೆಗಳೇ ಉರುಳಿ ಹೋಗುತ್ತಿದ್ದವು. ನೂರಾರು ಮಂದಿ - ಸಹಸ್ರಾರು ಮಂದಿ ಯುದ್ಧದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರು. ರಕ್ತಸಿಕ್ತ ರುಂಡಗಳ ಮೇಲೆ ಹೆಜ್ಜೆಯಿಟ್ಟು ಮೇಲೇರಿ 'ಗದ್ದುಗೆ' ಮೇಲೆ ಕುಳಿತು ಮಂದಹಾಸ ಬೀರುತ್ತಿದ್ದ ಗೆದ್ದರಾಜ. ವಿಜಯೋತ್ಸವ ಆಚರಿಸುತ್ತಿದ್ದ.

ಇದು ಶ್ರೀರಾಮ ಚಂದ್ರನಿಗೆ ಬಿಟ್ಟಿದ್ದಲ್ಲ. ದಶರಥನು ಶ್ರೀರಾಮಚಂದ್ರನನ್ನು ಗದ್ದುಗೆಯೇರಲು ಹೇಳಿದಾಗ, ಕೈಕೇಯಿ ಹಟ ಹಿಡಿದು 'ಭರತನಿಗೆ ಪಟ್ಟ' ಎಂದು ಹೇಳಿ ಶ್ರೀರಾಮಚಂದ್ರನನ್ನು ಕಾಡಿಗೆ ಅಟ್ಟಲಿಲ್ಲವೇ? ಗದ್ದುಗೆ ದೊರಕಿದರೂ ಭರತನೋ ತ್ಯಾಗಿಯಂತಿದ್ದು ರಾಮಚಂದ್ರನಿಗಾಗಿ ಕಾಯುತ್ತಿದ್ದು ಅವನಿಗೇ ಗದ್ದುಗೆ ಒಪ್ಪಿಸಲಿಲ್ಲವೇ?! ಇದೇನು ನಂಬುವ ಮಾತೇ? ಯಾರಾದರೂ ಸಿಕ್ಕಿದ ಅಧಿಕಾರ ಬಿಟ್ಟು ಕೊಡ್ತಾರ್ಯೇ ಎಂದು ಒಂದು ಸಾರಿ ಕೊಂಕು ಮಾತು ಹೇಳಿದ ಪರಮೇಶಿ! ''ಯಾಕಯ್ಯ ಸಾಧ್ಯವಿಲ್ಲ ಕಲಿಯುಗದಲ್ಲೇ ನಮ್ಮ ಕಣ್ಣಮುಂದೆ ಶ್ರೀ ಕಂಠಿಯವರು ಭರತನ ಹಾಗೆ ಮಾನ್ಯ ನಿಜಲಿಂಗಪ್ಪನವರಿಗಾಗಿ ಕಾಯುತ್ತಿದ್ದು ಅಧಿಕಾರ ಬಿಟ್ಟುಕೊಡಲಿಲ್ಲವೇ? ಎಂದಾಗ ತೆಪ್ಪಗಾದ ಅನ್ನಿ. ಶ್ರೀ ಲಾಲೂಪ್ರಸಾದ್‌ಜೀಗಾಗಿ - ಶ್ರೀಮತಿ ರಾಬರಿದೇವಿ ಕಾಯುತ್ತಾ ಕಾಯುತ್ತಾ ಕೊನೆಗೆ ಸೋತು ಸುಣ್ಣವಾಗಲಿಲ್ಲವೇ? ಏನೋ ಒಂದೊಂದು ಸಲ ಹಾಗೂ ಆಗುತ್ತೆ ಒಂದೊಂದು ಸಲ ಹೀಗೂ ಆಗುತ್ತೆ. ''ಇಷ್ಟೆಲ್ಲ ಮಾಡುವುದು ಗೇಣು ಹೊಟ್ಟೆಗಾಗಿ

ಮೂರು ಬಟ್ಟೆಗಾಗಿ'' ಅಂತ ಹೇಳ್ತಿದ್ದರು, ಅದು ಬದಲಾಗಿ ''ಇಷ್ಟೆಲ್ಲಾ ಮಾಡುವುದು ಗದ್ದುಗೆಗಾಗಿ - ದೊಡ್ಡ ಹುದ್ದೆಗಾಗಿ'' ಅಂತ ಹೇಳೋ ಕಾಲ ಬಂದಿದೆ.

ನಮ್ಮೂರಿನಲ್ಲಿ ಪುರಾತನವಾದ ಶಿವಾಲಯ ಮಳೆಗೆ ಗಾಳಿಗೆ ಮುರಿದುಬಿದ್ದು ಹೋಯಿತು. ದೇವಾಲಯವನ್ನು ಪುನರ್ ನಿರ್ಮಾಣ ಮಾಡಬೇಕೆಂದು ಒಂದು ಸಮಿತಿ ಮಾಡಿಕೊಂಡು ಊರಿನ ಮುಖಂಡರು ಮುಂದಾದರು. ಹಳೆಯ ಊರಿನಲ್ಲಿ ದೇವಾಲಯವಿತ್ತು, ಈಗ ಊರು ದೊಡ್ಡದಾಗಿ ಬೆಳೆದು ನಿಂತಿದೆ. ಸಮಿತಿಯವರು ಊರಿನ ಹೊರಗಿರುವ ದೇವಾಲಯ ಹೇಗೂ ಬಿದ್ದು ಹೋಗಿದೆ. ಆ ಶಿವಲಿಂಗವನ್ನು ಹೊಸ ಊರಿನ ಮಧ್ಯೆ ಪ್ರತಿಷ್ಠಾಪನೆ ಮಾಡಿ ದೇವಾಲಯ ಕಟ್ಟೋಣ ಎಂದು ತೀರ್ಮಾನಿಸಿದರು. 'ಊಹೂಂ!' ಅದು ನಡೀಲಿಲ್ಲವಲ್ಲ! ಯಾಕೆಂದರೆ ಆ ಪುರಾತನ ದೇವಾಲಯ ''ಅಡಮಿ ಮಠದ ಗದ್ದುಗೆಗೆ ಸೇರಿದ್ದು. ಗದ್ದುಗೆಗೆ ಸೇರಿದ ಆಲಯವನ್ನು ಸ್ಥಳ ಬದಲಾವಣೆ ಮಾಡುವಂತಿಲ್ಲ'' ಎಂದು ಗುರುಪೀಠದವರು ಅಪ್ಪಣೆ ಕೊಡಿಸಿದ ಕಾರಣ, ಎಲ್ಲರಿಗೂ ಅನಾನುಕೂಲವೆಂದು ಸಮಿತಿಯವರು ಭಾವಿಸಿದರೂ ಇದ್ದ ಸ್ಥಳದಲ್ಲೇ ದೇವಾಲಯ ಕಟ್ಟಲಾಯಿತು. ಇದನ್ನೆಲ್ಲಾ ಯಾಕೆ ಹೇಳಿದೆನೆಂದರೆ 'ಗದ್ದುಗೆ' ಮಹಾತ್ಮೆ ಅಂತಹ ಬಲಯುತವಾದದ್ದು. ಅದು ರಾಜಪೀಠವಾಗಲಿ ಗುರುಪೀಠವಾಗಲಿ, ಹುದ್ದೆಯ ಪೀಠವಾಗಲಿ ಗದ್ದುಗೆಯೆಂದ ಮೇಲೆ ಮುಗಿದು ಹೋಯಿತು, ಅದಕ್ಕೆ ಎದುರು ಮಾತೇಯಿಲ್ಲ!

ಗುರುಪೀಠ - ರಾಜಪೀಠವನ್ನೇ ಅಲುಗಿಸಬಹುದು. ರಾಜಪೀಠ ಹುದ್ದೆಯ ಪೀಠವನ್ನು ಅಲುಗಿಸಬಹುದು. ಅಂದರೆ ಗುರುಪೀಠ ರಾಜಪೀಠಕ್ಕಿಂತ ಬಲವಾದದ್ದು ಎಂದಾಯಿತು. ಅದಕ್ಕೇ ಇರಬೇಕು ರಾಜಕಾರಣಿಗಳು ಯಾರನ್ನು ಎದುರು ಹಾಕಿಕೊಂಡರೂ ಗುರುಪೀಠದವರನ್ನು ಎದುರು ಹಾಕಿಕೊಳ್ಳೋಲ್ಲ, ಧರ್ಮರಾಯನಂಥ ಧರ್ಮಸಿಂಗರಂತೂ ಯಾವ ಯಾವ ಮಠಗಳಿವೆಯೋ ಎಲ್ಲಾ ಮಠದ ಗುರುಪೀಠದ ಕಾರ್ಯಕ್ರಮಗಳಿಗೆ ಹೋಗಿ ಭಾಗಿಯಾಗಿ 'ನಿಮ್ಮ ಮಠ ಬೆಳೆಯಬೇಕು - ಉಳಿಯಬೇಕು!' ಹೀಗೆಲ್ಲಾ ಹೇಳಿ ಎಲ್ಲರಿಗೂ ಒಳ್ಳೆಯವರಾಗಿ ಉಳಿದಿದ್ದಾರೆ. ''ಕೆಲವು ಮುಖ್ಯಮಂತ್ರಿಗಳು ತಮ್ಮ ಮಠವೇ ಹೆಚ್ಚು'' ಎಂದು ಗರ್ವದಿಂದ ಮೆರೆದು ಮಣ್ಣುಮುಕ್ಕಿದ್ದಾರೆ. ಪ್ರಧಾನ ಮಂತ್ರಿಗಳಿಂದ ಹಿಡಿದು ಸಾಮಾನ್ಯ ಮಂತ್ರಿಯವರೆಗೆ ಎಲ್ಲಾ ರಾಜಕಾರಣಿಗಳೂ ಒಂದಿಲ್ಲೊಂದು ಮಠದ ಗುರುಪೀಠದ ಬೆನ್ನು ಹತ್ತಿ ಅವರ ಬೆಂಬಲಕ್ಕಾಗಿ ಹಾತೊರೆಯುತ್ತಿರುತ್ತಾರೆ. 'ಜಾತ್ಯಾತೀತ' ಅಂತ ಹೇಳಿಕೊಳ್ಳುವವರೂ ಸಹ ಅಲ್ಪಸಂಖ್ಯಾತರು, ದುರ್ಬಲರು, ಹಿಂದುಳಿದವರು ಹೀಗೆ ಹೊಸ ಮಠಗಳನ್ನು ಸೃಷ್ಟಿಸಿಕೊಂಡು ಅವರ ಕೃಪೆಗಾಗಿ ಹಾತೊರೆಯುತ್ತಾರೆ.

''ಸಬಕೋ ಸನಮ್ಮತಿದೇಭಗವಾನ್! ರಾಮ್ ರಹೀಂ ಏಕ್‌ಹೈ!'' ಹೀಗೆಲ್ಲಾ ಹೇಳೋಕೆ ಜನ ಹೆದರಿಬಿಡ್ತಾರೆ. ಯಾಕೆಂದರೆ ಗಾಂಧೀಜೀನ ಸುಟ್ಟು ಕೊಂದ ಹಾಗೆ ಎಲ್ಲಿ ಸುಟ್ಟುಬಿಡ್ತಾರೋ ಅಂತ ಹೆದರ್ತಾರೆ. ಜಾತ್ಯಾತೀತ ಸರ್ಕಾರಗಳಲ್ಲೂ ''ನಮ್ಮ ಜಾತಿ ಅಥವಾ ಪಂಗಡಕ್ಕೆ ಮಂತ್ರಿ ಪದವಿ ಕೊಟ್ಟಿಲ್ಲ'' ಅಂತ ಹೋರಾಟಗಳನ್ನು ನಡೆಸುವುದನ್ನು ನೋಡ್ತೀವಿ.

ಜಾತಿ ಹೆಸರಿನಲ್ಲಿ ಇಸ್ಲಾಂ ದೊರೆಗಳು ಜಗತ್ತನ್ನೇ ಗೆಲ್ಲುವ ಯತ್ನ ಮಾಡಲಿಲ್ಲವೇ ಮಲ್ಲಿಕಾಫರನಿಂದ ಹಿಡಿದು - ಬಹುಮನಿ ಸುಲ್ತಾನರು - ಔರಂಗಜೇಬ್ ಹೀಗೆ ಎಷ್ಟು ಮಂದಿ? ಎಲ್ಲ ಮತಗಳ ದಾಂಧಲೆಯನ್ನು, ಗ್ರೀಕರು, ಹೂಣರು, ಯವನರು, ಮುಸ್ಲಿಮರು, ಡಚ್ಚರು, ಫ್ರೆಂಚರು, ಆಂಗ್ಲರು ಹೀಗೆ ಎಲ್ಲಾ ರೀತಿಯ ಜನರ, ಸಂಸ್ಕೃತಿಯ, ದಾಂಧಲೆಗಳನ್ನು ನುಂಗಿ ನೀರು ಕುಡಿದು 'ವಾತಾಪಿ ಜೀರ್ಣೋಭವ' ಎಂದ ಹಿಂದೂ ಮತದ ಆಳ ಅಂತರ ಆ ತ್ರಿಮೂರ್ತಿಗಳಿಗೂ ತಿಳಿಯದೆ ಅಚ್ಚರಿ ಮೂಡಿಸುವ ಸಂಗತಿಯಾಗಿದೆ.

ಇವೆಲ್ಲಾ ಇವನ್ಯಾಕೆ ಹೇಳ್ತಾನೆ ಅಂತ ಕೇಳ್ಬೇಡಿ. ಯಾಕೆ ಹೇಳ್ತಿದ್ದೀನಿ ಅಂದರೆ ಗುರುಪೀಠದ 'ಗದ್ದುಗೆ' ಎಷ್ಟೊಂದು ಪ್ರಭಲವಾದದ್ದು ಅಂತ ಹೇಳೋಕೆ ಹೊರಟೆ ಅಷ್ಟೆ. ಈಗೀಗ ಗುರುಪೀಠದ ಗದ್ದುಗೆಗೂ ಕಾದಾಟ, ಬೈದಾಟ, ಹೊಡೆದಾಟ - ಬಡಿದಾಟಗಳು ಅಲ್ಲಲ್ಲಿ ನಡೀತಿವೆ. ಆದರೂ ಜನರ ನಂಬಿಕೆ ಮಾತ್ರ ಅಚಲ. ಕೆಲವು ಗುರುಪೀಠದವರು ಜೈಲಿಗೆ ಹೋಗಿ ಬಂದರೂ ಪೂರ್ಣ ಕುಂಭ ಸ್ವಾಗತ ನೀಡಿ ಕಾಲಿಗೆ ನಮಸ್ಕಾರ ಮಾಡ್ತಾರೆ ಜನ. ಮತದ ಬಗ್ಗೆ - ಗುರುಗಳ ಬಗ್ಗೆ ಭಕ್ತಾದಿಗಳಿಗೆ ಅಷ್ಟೊಂದು ವಿಶ್ವಾಸ, ನಂಬಿಕೆ. ಅದಕ್ಕೇ ಇರಬೇಕು ಒಬ್ಬ ಮಹಾಶಯ 'ಮಠವೆಂಬುದು ಕುಡಿತದ ಅಮಲಿನಂತೆ!' ಅಂತ ಹೇಳಿದ್ದು. ಈಗ ಅರ್ಥವಾಯಿತಲ್ಲ ಗುರುಪೀಠದ ಗದ್ದುಗೆ - ರಾಜಪೀಠದ ಗದ್ದುಗೆಯನ್ನು ಕಿತ್ತು ಹಾಕಬಲ್ಲದು ಅಂತ! ಒಂದು ವಿಚಿತ್ರ ಮತಗಳನ್ನು ಮರೆತ ಜನ 'ಇಸಂ'ಗಳನ್ನು ನಂಬಿ ಅದಕ್ಕಾಗಿ ಸಾಯ್ತಾರೆ.

ಅಧಿಕಾರದ ಗದ್ದುಗೆಗಳಂತೂ 'ನಡೆಯುವಷ್ಟು ದಿನ ನಾಣ್ಯ'. ಅಧಿಕಾರದಲ್ಲಿರುವಷ್ಟು ದಿನ ಸೊಂಟ ಬಗ್ಗಿ ನಮಸ್ಕಾರ ಮಾಡುವ ಜನ ಎಷ್ಟು ಮಂದಿ. ಕಾಲಿನ ಚಪ್ಪಲಿ ತಲೆಮೇಲೆ ಇಟ್ಟುಕೊಳ್ಳುವವರೂ ಇರ್ತಾರೆ. 'ಹೇಳಿದ್ದೇ ವೇದವಾಕ್ಯ' 'ಜನ ಜೀಹುಜೂರ್' ಅಂತಾರೆ. ಅಧಿಕಾರ ಹೋದಮೇಲೆ ಗದ್ದುಗೆಯಿಂದ ಕೆಳಗಿಳಿದ ಮೇಲೆ 'ಕೈಸಾಹೈ?' ಅಂತಾನೂ ಯಾರೂ ಕೇಳೋಲ್ಲ. ಅವರ ಕಡೆ ತಿರುಗಿ ಸಹ ನೋಡೋಲ್ಲ. ಅದಕ್ಕೇ ಅಧಿಕಾರವಿದ್ದಾಗ ಗದ್ದುಗೆಯಲ್ಲಿ ಕುಳಿತಿದ್ದಾಗ ಮಂದಿ ಎಲ್ಲಾ ಮಾಡಿಕೊಳ್ತಾರೆ, ಎಲ್ಲಾ ಅನುಭವಿಸುತ್ತಾರೆ. ಗದ್ದುಗೆ ಹೋದ ಮೇಲೆ ಸನ್ಯಾಸಿಗೂ ಕಡೆ.

ಒಂದು ಖಾಸಗಿ ಕಂಪೆನಿಯಲ್ಲಿ ಜನರಲ್ ಮ್ಯಾನೇಜರ್ ಒಬ್ಬರಿದ್ದರು. ಅವರು ಗದ್ದುಗೆಯಲ್ಲಿದ್ದಾಗ 'ಹುಲಿ!' ಅವರನ್ನು ಕಂಡರೆ ಕಂಪೆನಿಯ ಅಧಿಕಾರಿಗಳು ಕೆಲಸಗಾರರು ಗಡಗಡನೆ ನಡುಗುತ್ತಿದ್ದರು. ಅವರು 'ಹುಂ!' ಎಂದರೆ ಮೈಲಿದೂರ ಓಡಿಹೋಗುತ್ತಿದ್ದರು. ಅವರು ಕಂಪೆನಿ ಒಳಗೆ ಬಂದರೆ ಅವರ ಹಿಂದೆ ಅಧಿಕಾರಿಗಳ ಸಾಲು ಕೈಕಟ್ಟಿಕೊಂಡು ಬರ್ತಿತ್ತು. ಅವರು ಏನು ನೋಡಿ, ಏನು ಬೈಯ್ಯುವರೋ ಎಂದು ಗಡಗಡನೆ ನಡುಗುತ್ತಿದ್ದರು. ಅವರು ನಿವೃತ್ತರಾದರು. ಸ್ನೇಹಿತರೊಬ್ಬರ ಗೃಹ ಪ್ರವೇಶಕ್ಕೆ ಹೋಗಿದ್ದಾಗ ಅವರೂ ಬಂದಿದ್ದರು. ಕಂಪೆನಿಯ ಕೆಲವು ಅಧಿಕಾರಿಗಳೂ ಬಂದಿದ್ದರು. ನಿವೃತ್ತ ಅಧಿಕಾರಿಯನ್ನು ಕಂಡು ಕೈಮುಗಿಯುವುದಿರಲಿ ಎರಡು ಸೌಹಾರ್ದದ ಮಾತುಗಳನ್ನಾಡುವುದಿರಲಿ, ಅವರ ಕಡೆ ತಿರುಗಿ ಸಹ ನೋಡಲಿಲ್ಲ. ಇವರಾಗಿ ಮಾತನಾಡಲು ಜನರಲ್ ಮ್ಯಾನೇಜರಿಗೆ ಬಿಗುಮಾನ. ಹೀಗಾಗಿ ಕೊನೆವರೆಗೆ

ಒಬ್ಬರಿಗೊಬ್ಬರು ಮಾತನಾಡಲೇಯಿಲ್ಲ. ಒಬ್ಬ ಅಧಿಕಾರಿಯನ್ನು ನಾನು ಈ ಬಗ್ಗೆ ಕೇಳಿದಾಗ 'ಅವನೊಬ್ಬ ಮನುಷ್ಯನೇನ್ರೀ! ಏನೋ ಪ್ರಪಂಚದಲ್ಲಿ ತಾನೊಬ್ಬನೇ ಮನುಷ್ಯ ಉಳಿದೋರು ಮೃಗಗಳು ಅನ್ನೋ ಹಾಗೆ ಮೆರೆದ! ಅವನ್ಯಾಕ್ರೀ ಮಾತನಾಡಿಸಬೇಕು?' ಎಂದು ಗುಡುಗಿದ. ಹುದ್ದೆಯ ಗದ್ದುಗೆಗೆ ಬೆಲೆ ಅಧಿಕಾರ ಇರುವವರೆಗೆ ಮಾತ್ರ.

ಚಿನ್ನದ ಮೆರಗು ಇರುವವರೆಗೆ ಹಿತ್ತಾಳೆ ಒಡವೆ ನೋಡಲು ಅಂದ. ಮೆರಗು ಹೋದಮೇಲೆ? ಸ್ನೋ ಪೌಡರ್ ಹಾಕಿಕೊಂಡಾಗ ಮೇಕಪ್‌ನಲ್ಲಿರುವ ಸಿನಿಮಾ ತಾರೆ ನೋಡಲು ಅಂದ. ಮೇಕಪ್ ಹೋದಮೇಲೆ?

ನಮ್ಮ ಪೂರ್ವಿಕರು ಒಂದು ಸಂಪ್ರದಾಯವಿಟ್ಟುಕೊಂಡಿದ್ದರು. ಅದೇನೆಂದರೆ, ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಅರಮನೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದ ಪೂರ್ವಿಕರೊಬ್ಬರು ಒಂದು ದೊಡ್ಡದಾದ ಸಾಲಂಕೃತ ಕುರ್ಚಿಯ ಮೇಲೆ ಕುಳಿತಿರುತ್ತಿದ್ದದ್ದು ವಾಡಿಕೆ. ಆ ಕುರ್ಚಿ ತಲೆ ತಲಾಂತರದಿಂದ ವಂಶಜರಿಗೆ ಬಂದಿದೆ. (ನನಗೆ ತಿಳಿದ ಹಾಗೆ 1877 ರಿಂದ ಅಂತ ಹೇಳ್ತಾರೆ) ಪ್ರತಿ ತಲೆಮಾರಿನಲ್ಲೂ ಮನೆಯ ಯಜಮಾನ ಮಾತ್ರ ಆ ಗದ್ದುಗೆಯ ಮೇಲೆ ಕುಳಿತುಕೊಳ್ಳುತ್ತಾನೆ. ಬೇರೆಯವರು ಕೂರುವುದಿಲ್ಲ. 'ಯಜಮಾನರ ಗದ್ದುಗೆ' ಅಂತ ಅದಕ್ಕೆ ಹೆಸರು. ಈ ತಲೆಮಾರಿನವರೆಗೆ ಹಾಗೇ ನಡಕೊಂಡು ಬಂದಿದೆ, ಆ ಗದ್ದುಗೆ ಇನ್ನೂ ಇದೆ, ಅದರ ಮೇಲೆ ಕುಳಿತುಕೊಂಡೇ ನಾನು ಈ ಲೇಖನ ಬರೀತಿದ್ದೀನಿ ಅಂದರೆ ನಂಬ್ತೀರಾ? ಮಂತ್ರಿ ಮಹಾಶಯ 'ಬಡತನ ನಿರ್ಮೂಲನ ಮಾಡ್ತೀನಿ. ಭ್ರಷ್ಟಾಚಾರ ನಿರ್ಮೂಲನ ಮಾಡ್ತೀನಿ ಡ್ಯಾನ್ಸ್‌ಬಾರ್‌ಗಳನ್ನು ನಿರ್ಮೂಲನ ಮಾಡ್ತೀನಿ, ಲಾಟರಿ ತೆಗೆದುಹಾಕ್ತೀನಿ!' ಹೀಗೆಲ್ಲಾ ಹೇಳ್ತಾನೆ, ನಂಬೋದು ಬಿಡೋದು ಜನಗಳಿಗೆ ಬಿಟ್ಟದ್ದು.

ಶ್ರೀಕೃಷ್ಣ ಪರಮಾತ್ಮ ದೊಡ್ಡ ಸಾಮ್ರಾಟನಾಗಿದ್ದರೂ, ಯದುಕುಲ ತಿಲಕನಾಗಿದ್ದರೂ ಯಕಶ್ಚಿತ್ ಬಾಲ್ಯದ ಗೆಳೆಯ ಹಿಡಿ ಅವಲಕ್ಕಿ ಆಸ್ತಿಯುಳ್ಳವ ಸುಧಾಮ ಬಂದಾಗ ಅವನನ್ನು ಕರೆತಂದು, ಉಪಚರಿಸಿ, ತಿನ್ನಲು ಮೃಷ್ಟಾನ್ನ ನೀಡಿ, ಅವನಿತ್ತ ಅವಲಕ್ಕಿ ತಿಂದು ಅವನಿಗೆ ಸಕಲ ಸೌಭಾಗ್ಯ ನೀಡಿದ ಕತೆ ಓದಿದ್ದೇವೆ. ಗದ್ದುಗೆಯಲ್ಲಿ ಕುಳಿತು ಓಲೈಸಿಕೊಳ್ಳುವ ಜನಕ್ಕೆ ಇಂತಹ ಸೌಜನ್ಯ, ಸೃಜನಶೀಲತೆ, ವಿನಯ, ಹೃದಯವೈಶಾಲ್ಯತೆಯಿರಲು ಸಾಧ್ಯವೇ? ನಮಗೆ ಆಶ್ಚರ್ಯವಾಗುತ್ತದೆಯಲ್ಲವೇ?!

ನನ್ನ ಅನುಭವವೊಂದು ಇದು ನಿಜ ಅನ್ನಿಸುತ್ತದೆ. ಹೇಗೆಂದರೆ ನನ್ನ ಸ್ನೇಹಿತ 'ಬಿದರಿ' ಒಂದು ಚಿಕ್ಕ ಕಂಪೆನಿ ಪ್ರಾರಂಭ ಮಾಡಿದ. ಆ ಸಮಯದಲ್ಲಿನಾನು ತಾಂತ್ರಿಕ ವಿಷಯಗಳ ಬಗ್ಗೆ ಸಹಾಯ ಮಾಡಿದ್ದೆ. ಅನಂತರ ನಾನು ಬೇರೆ ಊರುಗಳಿಗೆ ಕೆಲಸದ ಮೇಲೆ ಹೋಗುವಂತಾಗಿ ಹತ್ತಾರು ವರ್ಷಗಳ ಕಾಲ ದೂರವಾಣಿ ಮೂಲಕ ಸಂಪರ್ಕ ಮಾತ್ರವಿತ್ತು. 'ಹೇಗಿದ್ದೀಯಾ? ಹೇಗೆ ನಡೀತಿದೆ ನಿನ್ನ ಕಂಪೆನಿ?' ಎಂದು ಕೇಳಿದಾಗ 'ಏನೋ ಪರವಾಗಿಲ್ಲ ಕುಂಟುತ್ತಾ ನಡೆಯುತ್ತಿದೆ!' ಎಂದು ಹೇಳುತ್ತಿದ್ದ' ಉತ್ತರ ಭಾರತದಿಂದ ಮತ್ತೆ ನಾನು ನನ್ನೂರಿಗೆ ಬಂದು ನೆಲಸಿದೆ. ಈಗ ನಾನು ನಿವೃತ್ತನಾಗಿ 'ಪಿಂಚಣಿ'ಗಾಗಿ ಕೈಚಾಚಿ ಬದುಕುವ ಪರಿಸ್ಥಿತಿ. ಹೇಗೋ ಜೀವನಕ್ಕೇನೂ ತೊಂದರೆಯಿಲ್ಲ

ಆರಕ್ಕೇರದೆ, ಮೂರಕ್ಕಿಳಿಯದೆ ಜೀವನ ಸಾಗುತ್ತಿತ್ತು. ಮನೆಯಲ್ಲಿ ವಿವಾಹವೊಂದು ನಡೆಯಲಿದ್ದು 'ಬಿದರಿ' ನೆನಪಾಗಿ ಕರೆಯೋಲೆಯೊಂದಿಗೆ ಅವರ ಮನೆ ಹುಡುಕಿಕೊಂಡು ಹೋದದ್ದಾಯಿತು. ಅವರ ಹಳೆ ಮನೆಯಿದ್ದಕಡೆ ಈಗ ಒಂದು ಭವ್ಯ ಬಂಗಲೆಯಿದೆ ಮನೆ ಮುಂದೆ ಮೂರು - ನಾಲ್ಕು ಕಾರುಗಳು ನಿಂತಿವೆ. ಹೆದರಿಕೊಂಡೆ ಕರೆಗಂಟೆ ಒತ್ತಿದೆ. ಅವನ ಮಡದಿ ಬಾಗಿಲು ತೆಗೆದರು. ಸ್ವಲ್ಪ ಹೊತ್ತು ನನ್ನ ಗುರುತು ಸಿಕ್ಕಲಿಲ್ಲ, ನಂತರ ನನ್ನ ಗುರುತು ಹಿಡಿದು ಒಳಗೆ ಕರೆದರು. ಒಳಗೆ ಹೋದೆ 'ಇಲ್ಲಿಬನ್ನಿ!' ಎಂದು ವೆರೆಂಡಾ ದಾಟಿದ ಮೇಲೆ ಸಿಗುವ ದೊಡ್ಡ ಹಜಾರವನ್ನು ತೋರಿಸಿದರು.

ದೊಡ್ಡ ಹಾಲಿನಲ್ಲಿ ಬೆಲೆಬಾಳುವ ಸುಖಾಸನಗಳು, ಕಿಟಕಿಗಳಿಗೆ ಬೆಲೆಬಾಳುವ ತೆರೆಗಳು, ನಡುವೆ ದೊಡ್ಡ ತೇಗದ ಮೇಜು, ಹವಾ ನಿಯಂತ್ರಿತ ಕೊಠಡಿ ಇಷ್ಟಲ್ಲದೆ ಹೂ ಗುಚ್ಛಗಳ ಅಲಂಕಾರ, ನಾನು ಕ್ಷಣಕಾಲ ತಬ್ಬಿಬ್ಬಾದೆ.

'ಕುಳಿತುಕೊಳ್ಳಿ, ಬಂದೆ' ಎಂದು ಆಕೆ ಒಳಗೆ ಹೋದರು. ನನಗೆ ಎಲ್ಲಿ ಕುಳಿತುಕೊಳ್ಳುವುದು ತಿಳಿಯದೆ ಒಂಟಿಯಾಗಿದ್ದ ಒಂದು ಸೋಫಾ ಮೇಲೆ ಕುಳಿತೆ. ಮುಂದೆ ದೊಡ್ಡ ಮೇಜು ಆಕಡೆ ಈಕಡೆ ಸುಖಾಸನಗಳು, 'ಬಿದರಿ' ಬಂದ 'ಓಹೊಹೋ! ಬರಬೇಕು ಏನಪ್ಪಾ ಅಪರೂಪ ದರ್ಶನ? ಇವತ್ತಿಗೆ ನಾನು ಧನ್ಯನಾದೆ ನೋಡು!' ಎಂದು ಹೇಳಿ ಕೈ ಹಿಡಿದು, ಆತ್ಮೀಯವಾಗಿ ಕೈಕುಲುಕಿ ಕುಳ್ಳಿರಿಸಿದ. ಕ್ಷೇಮ ಸಮಾಚಾರ ವಿಚಾರಿಸಿದ. ಅವನ ಪತ್ನಿ ಸಹ ಬಂದರು. ಇಬ್ಬರೂ ನನ್ನೆದುರಿಗೆ ಕುಳಿತುಕೊಂಡು ನನ್ನ ವಿಚಾರವೆಲ್ಲಾ ವಿಚಾರಿಸಿದ ''ಇವನೇ ನನಗೆ ಕಂಪೆನಿ ನಡೆಸುವ ಟೆಕ್ನಿಕಲ್ ನೋಹೌ ಎಲ್ಲಾ ತಿಳಿಸಿದ್ದು. ಇವನ ಉಪಕಾರವಿಲ್ಲದಿದ್ದರೆ ನಾನು ಹೀಗೆ ಈಗ ಇರುತ್ತಿರಲಿಲ್ಲ ಗೊತ್ತಲ್ಲಾ ನಿನಗೆ!'' ಎಂದು ಹೆಂಡತಿಗೆ ಹೇಳಿದ 'ಅವರ ಉಪಕಾರ ಮರೆಯೋಕೆ ಆಗುತ್ಯೇ?' ಅಂತ ಆಕೆಯೂ ಹೇಳಿದರು. ತಿನ್ನಲು ಶುದ್ಧವಾದ ತುಪ್ಪದಲ್ಲಿ ಮಾಡಿದ ಕೇಸರಿಬಾತ್, ಬಿಸಿಬೇಳೆಬಾತ್ ಎಲ್ಲಾ ಬಂತು. ಗಮಗಮಿಸುವ ಬಾದಾಮಿ ಹಾಲು ಬಂತು.

ನಾನು ವಿವಾಹದ ಕರೆಯೋಲೆ ಕೊಟ್ಟು 'ಖಂಡಿತ ಬರಬೇಕು' ಎಂದು ಆಹ್ವಾನಿಸಿದೆ. 'ಈಗ ಬಂದೆ' ಎಂದು ಅವನು ಒಳಗೆ ಹೋದ. ಆಕೆ ಸ್ವಲ್ಪ ಹೊತ್ತು ಮದುವೆ ಏರ್ಪಾಟುಗಳ ಬಗ್ಗೆ ಮಾತಾಡುತ್ತಿದ್ದು ಒಳಗೆ ಹೋದರು.

ನಾನು ಆಗ ಸಾವಕಾಶವಾಗಿ ಸುತ್ತಲೂ ನೋಡಿದೆ. ನಾನು ಕುಳಿತಿದ್ದ ಜಾಗ ಕಾನ್‌ಫರೆನ್ಸ್ ಹಾಲ್ ಆಗಿತ್ತು. ನಾನು ಕುಳಿತಿದ್ದ ಗದ್ದುಗೆ ಮುಂದೆ 'ಮ್ಯಾನೇಜಿಂಗ್ ಡೈರೆಕ್ಟರ್' ಎಂಬ ಚಿಕ್ಕ ನಾಮಫಲಕವಿತ್ತು. ಗೋಡೆಯ ಮೇಲೆ 'ಡೈರೆಕ್ಟರ್ಸ್ ಬೋರ್ಡ್ ರೂಂ' ಎಂಬ ಫಲಕವಿತ್ತು. ನಾನು ಗಾಬರಿಯಾದೆ. ನಾನು ಕುಳಿತಿದ್ದು 'ಮ್ಯಾನೇಜಿಂಗ್ ಡೈರೆಕ್ಟರ್ ಗದ್ದುಗೆ' 'ಛೇ! ಎಂಥಾ ಕೆಲಸವಾಯಿತು!' ಎಂದು ನನಗೆ ಪಶ್ಚಾತ್ತಾಪವಾಗಿ ನಾಚಿಕೆಯಿಂದ ನೀರಾದೆ. ಅವರಿಬ್ಬರೂ ಬಂದರು ಜೊತೆಯಲ್ಲಿ ಒಂದು ಕೈಚೀಲ ತಂದಿದ್ದರು.

''ಇದರಲ್ಲಿ ಸ್ವಲ್ಪ ಹಣ್ಣು-ಸ್ವೀಟ್ಸ್‌ಯಿದೆ ಬಾಭಿಗೆ ಕೊಟ್ಟಿಡು!'' ಎಂದು ನನ್ನ ಕೈಗೆ ಕೊಟ್ಟ.

''ಇವೆಲ್ಲಾ ಯಾಕೆ!?'' ಎಂದೆ. 'ನೀನಂತೂ ಬಾಳೀನ ಕರ್ಕೊಂಡು ಬರ್ಲಿಲ್ಲ. ನಾವು ಬರೀಕೈಲಿ ಕಳಿಸೋಕೆ ಆಗುತ್ಯೇ. ಬೇಡ ಅನ್ನಬೇಡ. ನಮ್ಮ ಸ್ನೇಹದ ಮೇಲಾಣೆ!' ಎಂದ. ನನ್ನ ಬಾಯಿ ಕಟ್ಟಿಹೋಯಿತು - ಮೌನವಾಗಿ ಸ್ವೀಕರಿಸಿದೆ.

''ನಾನು ಇಲ್ಲಿ ಗೊತ್ತಿಲ್ಲದೆ ಕುಳಿತುಕೊಂಡೆ...!'' ಎಂದು ಸಂಕೋಚದಿಂದ ಹೇಳಿದೆ.

''ನೀನು ಅಲ್ಲಿ ಕುಳಿತದ್ದು ನಮಗೆಷ್ಟು ಸಂತೋಷವಾಗಿದೆ ಗೊತ್ತಾ, ಆ ಗದ್ದುಗೆ ಪಾವನವಾಯಿತು ಅಂದ.'' ಉಸಿರು ಕಟ್ಟಿದಂತಾಗಿ ನಾನು ಹೊರಟೆ.

'ವೆಂಕಟೇಶಾ...!' ಎಂದು ಡ್ರೈವರನ್ನು ಕರೆದು 'ಸಾಹೇಬರನ್ನು ಮನೆವರೆಗೆ ಬಿಟ್ಟುಬಾ!' ಅಂದ. ಹವಾನಿಯಂತ್ರಿತ ವಿದೇಶಿಕಾರು ರೆಡಿಯಾಗಿ ನಿಂತಿತು.

ಗಂಡ-ಹೆಂಡತಿ ಇಬ್ಬರೂ ಸೌಹಾರ್ದತೆಯಿಂದ ಕೈಮುಗಿದು ಹಸನ್ಮುಖರಾಗಿ ಬೀಳ್ಕೊಟ್ಟರು. ವಿದೇಶಿ ಕಾರಿನಲ್ಲಿ ನಾನು ಮನೆಮುಂದೆ ಇಳಿದಾಗ ನಮ್ಮ ಮನೆಯವರಿಗೆಲ್ಲಾ ಅಚ್ಚರಿ!

ಈ ಕಾಲದಲ್ಲೂ ಇಂಥಹ ಸ್ನೇಹಿತನೇ?!

ನಮ್ಮ ದೇಶದ ಸಂಸ್ಕೃತಿ ಇನ್ನೂ ಜೀವಂತವಾಗಿದೆಯೆಂದು ಸಂತೋಷವಾಯಿತು. ಈ ಸಂಸ್ಕೃತಿ ಮಕ್ಕಳನ್ನು ತಂದೆ ತಾಯಿ ಬೆಳಸುವ ರೀತಿಯಿಂದ ಬಂದಿರಬಹುದೇ? ಹಾಗೇನಾದರೂ ಇದ್ದರೆ ಅವರ ತಂದೆತಾಯಿ ಧನ್ಯರು!

ಹೀಗೆ ನಂಬಲಾಗದ ಸತ್ಯ ಘಟನೆಗಳು ಈ ಜಗತ್ತಿನಲ್ಲಿ ಎಷ್ಟೋಯಿವೆ ಅಲ್ಲವೇ? ಅನಂತರ ಸಾವಕಾಶವಾಗಿ 'ಬಿದರಿ' ಬಗ್ಗೆ ವಿಚಾರಿಸಿದಾಗ ತಿಳಿದದ್ದು, ಆತನೀಗ ದೊಡ್ಡ ಇಂಡಸ್ಟ್ರಿಯಲಿಸ್ಟ್, ಅಲ್ಲದೆ ವರ್ಷಕ್ಕೆ ಕೋಟ್ಯಾಂತರ ರೂಪಾಯಿ ಲಾಭ ಗಳಿಸುವ ಉದ್ಯಮ ಹೊಂದಿದ್ದ.

ಕೋಟ್ಯಾಧಿಪತಿಗೆ ಇಂತಹ ವಿನಯವೇ?

ಈ ವಿಷಯ ಯಾಕೆ ಹೇಳಿದೆನೆಂದರೆ, 'ಗದ್ದುಗೆ'ಗೆ ಬೆಲೆ ಬರಬೇಕಾದರೆ, ಇಂತಹ ಜನರಿಂದ ಮಾತ್ರ. ಗದ್ದುಗೆ ಮೇಲೆ ಕುಳಿತಾಗ ಅಧಿಕಾರ - ವೈಭೋಗಗಳಿದ್ದರೂ, ಪ್ರಾಮಾಣಿಕತೆ, ಮಾನವೀಯತೆಯನ್ನು ಮರೆಯದಿದ್ದಾಗ; ಅವರು ಕುಳಿತ ಗದ್ದುಗೆಗೆ ದೊಡ್ಡ ಬೆಲೆ ಬರುತ್ತದೆ. ಜನ ಗೌರವಿಸುತ್ತಾರೆ, ಆದರಿಸುತ್ತಾರೆ.

ಶ್ರೀಕೃಷ್ಣದೇವರಾಯ ತಾನು ಮಹಾನ್ ಸಾಮ್ರಾಟನಾದರೂ ಒಬ್ಬ ಕವಿಯ ಪಲ್ಲಕ್ಕಿ ಹೊತ್ತನಂತೆ, ರಾಜಗುರು ವ್ಯಾಸರಾಜರು ಕುರುಬ ನಾಯಕ ಕನಕದಾಸನಿಗೆ ಆದ್ಯತೆ ಕೊಟ್ಟ ಹಾಗೆ, ಗಾಂಧೀಜಿಯವರು ರಾಷ್ಟ್ರಪಿತನಾಗಿ ಮಹಾತ್ಮರೆನಿಸಿದರೂ ಜನಸಾಮಾನ್ಯರ ನೋವುಗಳಿಗೆ ಸ್ಪಂದಿಸುತ್ತಿದ್ದ ಮಾನವೀಯತೆ, ಸರ್.ಎಂ. ವಿಶ್ವೇಶ್ವರಯ್ಯನವರು, ಪ್ರಾಮಾಣಿಕತೆ ಮತ್ತು ದಕ್ಷತೆಗೆ ಬೆಲೆ ಕೊಟ್ಟ ಹಾಗೆ ಎಷ್ಟೋ ಮಹಾನ್ ವ್ಯಕ್ತಿಗಳು ತಮ್ಮ ದೊಡ್ಡ ವ್ಯಕ್ತಿತ್ವದಿಂದ ತಾವು ಕುಳಿತ 'ಗದ್ದುಗೆ'ಗೆ ದೊಡ್ಡ ಬೆಲೆ ತಂದುಕೊಡುತ್ತಾರೆ.

ನಾವು-ನೀವು ಹೇಗೆ?!

★★★

ತುಂತುರು

– ಆನಂದ

★ ರಿಲೆಯನ್ಸ್ ಕಂಪನಿಯವರು ಮಾವಿನಹಣ್ಣು ಮಾರಿದರೆ ಅದಕ್ಕೆ ಅವರು ನೀಡುವ ಹೆಸರು: ಆಮ್‌ಬಾನಿ.

★ ಅನಾಮಧೇಯರಿಗೆ ಸಲ್ಲುವ ದೇಶವಲ್ಲ ಭಾರತ. ಮರ್ಯಾದೆಯಿಂದ ಬಾಳಬೇಕೆಂದಿದ್ದರೆ ನೀವು ಏನಾದರೂ ಆಗಿರಲೇಬೇಕು. ನಿಮ್ಮ ಬಳಿ ಹಣವಿಲ್ಲದಿದ್ದರೆ ಅಂತಸ್ತಾದರೂ ಇರಬೇಕು. ಆಗ ಮಾತ್ರ ನೀವು ಸಲ್ಲುವಿರಿ.

★ 'ಎಡ' ಕೈ ಏನು ಮಾಡಲು ಹೊರಟಿದೆ ಎಂಬುದು ಬಲ 'ಹಸ್ತ'ಕ್ಕೆ ತಿಳಿಯುತ್ತಿಲ್ಲ ಎನ್ನುವಂತಿದೆ.

★ ವಿಮಾನದಲ್ಲಿ ಏನೂ ಉಪಚಾರ ಇರದು ಎಂದ ಮಾತ್ರಕ್ಕೆ ಪ್ರಯಾಣಿಕರನ್ನು ನೆಲದ ಮೇಲೆ ಕೂರಿಸಿ ಕೊಂಡೊಯ್ಯಲಾಗುವುದು ಎಂದರ್ಥವಲ್ಲ.

★ ನಾವು ಒಬ್ಬೊಬ್ಬರೂ ಇನ್ನೂ ಸಂಶೋಧಿಸದ ಪೆಂಟಿಯಂ 10 ಪ್ರೊಸೆಸರ್‌ಗಳು. ಅಷ್ಟು ಪ್ರತಿಭೆ ಇದೆ ನಮ್ಮಲ್ಲಿ.

★ ಕುಡಿದವನು ಕೊಚ್ಚಿಕೊಂಡ ಬೊಗಳೆಯಲ್ಲಿ ಅಷ್ಟು ವಿಶ್ವಾಸವನ್ನಿರಿಸುವುದೆ? ಸತ್ಯ ಹೊರಬರುವುದು ಕುಡಿದಾಗ ಮಾತ್ರ.

★ ನನಗೆ ಯಾರೂ ಗಾಡ್ ಫಾದರ್ ಇಲ್ಲ. ಆದರೆ ಗಾಡ್ ಇದ್ದಾನೆ ಅಷ್ಟು ಸಾಕು.

★ ಹ್ಯಾರಿ ಪಾಟರ್ ಸಾಹಸದ ಏಳನೆಯ ಕಾದಂಬರಿ ಏಕೆ ಸಣ್ಣಗಾತ್ರದಾಗಿತ್ತು ಎಂದರೆ ದಪ್ಪ ಆರನೆಯ ಪುಸ್ತಕ ಲೇಖಕಿಯ ಪಾದದ ಮೇಲೆ ಬಿದ್ದು ನೋವು ಉಂಟುಮಾಡಿತ್ತು.

★ ನಿಜವಾದ ಹಾಸ್ಯ ಸವಿಯಲು ನಾನು ಹಿಂದಿ ಚಿತ್ರಗೀತೆಯ ದೃಶ್ಯಾವಳಿ ಅಥವಾ ದೂರದರ್ಶನದ ಯಾವುದಾದರೂ ಸೀರಿಯಲ್ ನೋಡುತ್ತೇನೆ.

★ ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡಿಸಿಕೊಳ್ಳಲು ನ್ಯಾಯಮೂರ್ತಿ ವೆಂಕಟಾಚಲ ನಮ್ಮ ನಿಮ್ಮಂತೆ ಲಂಚ ಕೊಡಲು ಸಾಧ್ಯವಿಲ್ಲ.

ವಿದ್ಯಮಾನಗಳು

– ಶು.ಶ.

ಒಂದೇ ವಾರದಲ್ಲಿ ಉಗ್ರಗಾಮಿಗಳು ಎರಡು ಕಡೆ ದಾಳಿ ಮಾಡಿದ್ದಾರೆ. ಅಯೋಧ್ಯೆಯಲ್ಲಿ ಆಗಬಹುದಾಗಿದ್ದ ಭಾರಿ ಅನಾಹುತ ತಪ್ಪಿತಲ್ಲ ಎಂದು ಸಮಾಧಾನಪಡುವ ಮೊದಲೇ ಲಂಡನ್ನಿನಲ್ಲಿ ಅಮಾಯಕರ ಮೇಲೆ ಆಕ್ರಮಣ ನಡೆದಿದೆ. ಈ ಎರಡು ಕಡೆಗಳಲ್ಲಿಯೂ ದಾಳಿ ನಡೆಯಬಹುದೆಂದು ಮುಂಚೆಯೇ ಮಾಹಿತಿ ಸಿಕ್ಕಿತಂತೆ ಆದರೂ ತಪ್ಪಿಸಲು ಸಾಧ್ಯವಾಗಲಿಲ್ಲ. ಭಯೋತ್ಪಾದನೆಯ ವಿರುದ್ಧದ ಯುದ್ಧದಲ್ಲಿ ಅವರೇ ಗೆಲ್ಲುತ್ತಿದ್ದಾರೇನೋ ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಹಮ್ ಹೋಂಗೇ ಕಾಮಿಯಾಬ್ - ಇಂದಲ್ಲ ನಾಳೆ ಗೆದ್ದೇ ಗೆಲ್ಲುತ್ತೇವೆ ಎನ್ನುವ ದೃಢ ನಂಬಿಕೆ ಇರಲೇಬೇಕು.

ಉಗ್ರಗಾಮಿಗಳ ಲಂಡನ್ ದಾಳಿಯಿಂದಾಗಿ ನಾವು ಅಗಾಥ ಕ್ರಿಷ್ಟಿ ಕಾದಂಬರಿಗಳಲ್ಲಿ ಓದುತ್ತಿದ್ದ ಸ್ಕಾಟ್ಲೆಂಡ್ ಯಾರ್ಡ್ ತೀಕ್ಷ್ಣಮತಿಗಳು ನಮ್ಮ ಮನೆಯ ಟೀವಿ ಪರದೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಇವರಲ್ಲಿ ಲಂಡನ್ ಮೆಟ್ರೋಪಾಲಿಟನ್ ಪೊಲೀಸರು ಅತ್ಯಂತ ದಕ್ಷರು ಎನ್ನುವ ಪ್ರತೀತಿಯಿದೆಯಂತೆ. (ಬರ್ಟಿ ವೂಸ್ಟರ್ ಅಂತಹವನೇ ಈ ಪೊಲೀಸರ ಹೆಲ್ಮೆಟ್ ಒಮ್ಮೆ ಕದ್ದಿದ್ದ ಎನ್ನುವ ಮಾತು ಬೇರೇ.) ಇಂತಹ ಚಾಣಾಕ್ಷರು ಇಂತಹ ಘೋರ ಕೃತ್ಯ ಎಸಗಿದವರು ಎಲ್ಲಿದ್ದರೂ ಅವರನ್ನು ಹಿಡಿದು ಶಿಕ್ಷಿಸುತ್ತಾರೆ. ಆದರೆ ಧರ್ಮದ ಹೆಸರಿನಲ್ಲಿ ಯುವಜನರಲ್ಲಿ ವಿಷವನ್ನು ಹರಡುತ್ತಿರುವವರ ದುಷ್ಕೃತ್ಯವನ್ನು ನಿಲ್ಲಿಸುವ ಶಕ್ತಿ ಇರುವವರು ಎಲ್ಲಾದರೂ ಇದ್ದಾರೆಯೇ?

★★★

ಗೋಡೆಯ ಮೇಲಿನ ಕ್ಯಾಲೆಂಡರ್ ಈಗ 2005ನೇ ಇಸವಿ ಎಂದು ಹೇಳುತ್ತಿದೆ. ಆದರೆ ನಾವು ಮತ್ತೆ ಇಪ್ಪತ್ತು ವರ್ಷ ಹಿಂದೆ ಹೋಗಿದ್ದೀವೇನೋ ಎಂದು ಅನುಮಾನವಾಗುತ್ತಿದೆ. ನೀವು 1985ರಲ್ಲಿ ಪೇಪರ್ ಓದುತ್ತಿದ್ದರೆ ಆ ದಿನಗಳು ಜ್ಞಾಪಕವಿರಬಹುದು: ರಾಜೀವ ಗಾಂಧಿಗೆ ಎಲ್ಲರನ್ನೂ ಇಪ್ಪತ್ತೊಂದನೆಯ ಶತಮಾನಕ್ಕೆ ಕೊಂಡೊಯ್ಯುವ ಉತ್ಸಾಹ; ವಯಸ್ಸಾದ ಮುದುಕಿ ಶಾ ಬಾನೋಗೆ ತಲಾಖ್ ಕೊಟ್ಟ ಶ್ರೀಮಂತ ಗಂಡ ಒಂದು ಜುಜುಬಿ ಮೊತ್ತ ಜೀವನಾಂಶವಾಗಿ ಕೊಡಬೇಕೆನ್ನುವ ಸುಪ್ರೀಂ ಕೋರ್ಟ್ ತೀರ್ಮಾನ; ಇದರ ವಿರುದ್ಧ ಮುಲ್ಲಾಗಳ ರಣಕಹಳೆ. ನ್ಯಾಯವಾದದ್ದನ್ನು ನ್ಯಾಯ ಎಂದು ತೀರ್ಪನ್ನು ಮೊದಲು ಸ್ವಾಗತಿಸಿದ ರಾಜೀವ್ ಮುಲ್ಲಾಗಳು ಹೇಳಿದ್ದೇ ಸರಿ ಎಂದು ಒಪ್ಪಿಕೊಳ್ಳಬೇಕಾದ ವೋಟ್ ಬ್ಯಾಂಕ್ ರಾಜಕಾರಣ; ಇದರಿಂದ ಎದ್ದ appeasement ಹುಯಿಲು; ಅದರ ಲಾಭ ಪಡೆದ ಬಿಜೆಪಿ.

ಈಗ 2005ರಲ್ಲಿ ಇಮ್ರಾನಾ ಪ್ರಕರಣ ಮತ್ತೆ ಇಂತಹುದೇ ವಿವಾದ ಸೃಷ್ಟಿಸಿದೆ. ಮುಲ್ಲಾಗಳ ತಪ್ಪು ನಿರ್ಣಯವನ್ನು ತಪ್ಪು ಎಂದು ಹೇಳಲು ಬಿಡದ ವೋಟ್‌ಬ್ಯಾಂಕ್ ರಾಜಕಾರಣ. ಈಗ ಉರಿಯುವ ಬೆಂಕಿಗೆ ತುಪ್ಪ ಹುಯ್ಯಲು ಇಷ್ಟೊಂದು ಟೀವಿ ಚಾನಲ್ಲುಗಳು. ಆದರೂ ಎರಡು ಮುಖ್ಯ ವ್ಯತ್ಯಾಸ. ಏನು ಎತ್ತ ತಿಳಿದುಕೊಳ್ಳದೇ ಶಾ ಬಾನೋಗೆ ಬೆಂಬಲ ಕೊಟ್ಟ ಅವತ್ತಿನ ರಾಜೀವ್ ಸ್ವಲ್ಪ ಎಳಕು. ಆದರೆ ಇವತ್ತಿನ ಸೋನಿಯಾ ಇಂತಹ ವಿಚಾರಗಳಲ್ಲಿ ದಿವ್ಯ ಮೌನ ಅಗತ್ಯ ಎಂದು ಪಾಠ ಕಲಿತಿರುವ seasoned ರಾಜಕಾರಣಿ.

★★★

ಎ.ಕೆ. ರಾಮಾನುಜನ್ ಒಂದು ಉಲ್ಲೇಖ: 'ನಾನೂ ನೀನೂ ಮಾತನಾಡುವಾಗ ಇಲ್ಲಿರುವವರು ಇಬ್ಬರಲ್ಲ, ಆರುಮಂದಿ! - ನನ್ನ ಮನಸ್ಸಿನಲ್ಲಿರುವ ನಾನು, ನಿನ್ನ ಮನಸ್ಸಿನಲ್ಲಿ ಕಲ್ಪಿತವಾದನಾನು, ಅಲ್ಲದೇ ನನ್ನ ಮನಸ್ಸಿನಲ್ಲಿ ಚಿತ್ರಿತವಾದ ನೀನು, ನಿನ್ನ ಮನಸ್ಸಿನಲ್ಲಿರುವ ನೀನು - ಈ ನಾಲ್ವರ ಜತೆಗೆ ಕಣ್ಣುಮುಚ್ಚಾಲೆಯಾಗುತ್ತ ನಿಜವಾದ ನಾನು, ನಿಜವಾದ ನೀನು! ಹೀಗೆ ನಾನು ನೀನು ಎನ್ನುವುದು ಇಬ್ಬರ ಏಕಾಂತವಲ್ಲ, ಅದು ಆರು ಮಂದಿಯ ಸಂತೆ.'

ನಮ್ಮ ನಿಮ್ಮಂತಹ ಏಕ ವ್ಯಕ್ತಿತ್ವದವರ ನಡುವಿನ ಸಂಭಾಷಣೆಗೇ ಈ ಗತಿಯಾದರೆ ಏಕಕಾಲದಲ್ಲಿ ದಶರೂಪ ಹೊಂದಿರಬೇಕಾದ ರಾಜಕಾರಣಿಗಳ ನಡುವಿನ ಸಂವಹನದ ಗತಿಯೇನು? ಇಂದಿನ ಕಿಚಡಿ ಸರ್ಕಾರದ ಒಬ್ಬರು ಮಂತ್ರಿಗಳು ಗಂಡಸಿಯ ಶಿವರಾಮು ಮತ್ತು ಹರದನಹಳ್ಳಿ ದೇವೇಗೌಡ ರೇವಣ್ಣ ನಡುವೆ ಮಾತುಕತೆ ಏನಾದರೂ ಆದರೆ ಅದು ಬರೀ ಜಾತ್ರೆಯಲ್ಲ ಕುಂಭಮೇಳವೇ ಸರಿ.

★★★

ಸನ್ಮಾನ ಸಮಾರಂಭಗಳಲ್ಲಿ ಇವರನ್ನು ಸನ್ಮಾನಿಸುವುದು ನಮ್ಮನ್ನು ನಾವೇ ಸನ್ಮಾನಿಸಿಕೊಂಡಂತೆ ಎಂದು ಹೇಳುವುದು ಕ್ಲೀಷೆಯಾಗಿದೆ. ಆದರೆ ಹಿರಿಯ ನಟ ರಾಜಕುಮಾರ್ ಅಂತಹವರ ಬಗೆಗೆ ಇಂತಹ ಮಾತು ಶತಾಂಶ ನಿಜವಾಗುತ್ತದೆ. ಎಷ್ಟೋ ಜನರು, ಸಂಸ್ಥೆಗಳು ರಾಜಕುಮಾರ್ ಸನ್ಮಾನಿಸಿ ಆಗ ಪ್ರತಿಫಲಿತವಾಗುವ ಬೆಳಕಿನಲ್ಲಿ ತಾವು ಹೊಳೆದಿದ್ದಾರೆ. ಈಗ ಕರ್ನಾಟಕದ ಮಂತ್ರಿ ಮಹೋದಯರಿಗೆ ರಾಜಕುಮಾರ್ ಎದುರು ಪ್ರಜ್ವಲಿಸುವ ಆಸೆ. ವರನಟನ ಬಗೆಗೆ ಹೊಸದಾಗಿ ಹೇಳಲು ಏನೂ ಉಳಿದಿಲ್ಲ, ಆದರೂ ಒಬ್ಬ ಅತಿ ಸೃಜನಶೀಲರು ಬೆವರಿನ ಮನುಷ್ಯ ಎನ್ನುವ ಹೊಸ ಬಿರುದನ್ನು ಸೂಚಿಸಿದ್ದಾರೆ. ನಮಗೆ ಗೊತ್ತಿರುವ ಹಾಗೆ ಒರಿಜಿನಲ್ ಬೆವರಿನ ಮನುಷ್ಯ ಪಾರ್ವತಿ ಮಾನಸ ಪುತ್ರ ಗಣಪತಿ. ಹಿಮಾಲಯದಲ್ಲಿ ವಾಸಿಸುವ ಆ ಮಹಾಮಾತೆ ತನ್ನ ದೇಹದ ಮೇಲೆ ಒಂದು ಮೂರ್ತಿ ಮಾಡುವಷ್ಟು ಬೆವರು ಅದಕ್ಕೆ ಅಂಟಿದ ಮಣ್ಣು ಜಮಾ ಆಗುವವರೆಗೂ ಏಕೆ ಸ್ನಾನ ಮಾಡಲಿಲ್ಲ ಎಂದು ಪಾಪಂ ಬಹಳ ಹಿಂದೆಯೇ ಕೇಳಿದ್ದರು!

ಉಕ್ತಿ - ಚಾಟೂಕ್ತಿ

- ಎನ್. ರಾಮನಾಥ್

'ಸ್ವಸಹಾಯ ಗುಂಪುಗಳಿಗೆ ಸಾಲ ವಿತರಣೆ'

- ಸುದ್ದಿ

ಜೋಕೆಯಿಂದಿರಲೊಳಿತು ಇಂತಹ ಸಹಾಯ
ಎಡವಿದರೆ ಕೊಡುಗೈ ಆಗುವುದು ನಿಸ್ಸಹಾಯ

★★★

'ಭಾರತದ ಕ್ರಿಕೆಟಿಗರು ದೈಹಿಕವಾಗಿ ಸಮರ್ಥ'

- ದೈಹಿಕ ತಜ್ಞ ಅಲನ್‌ಕಿಂಗ್

ಹಣ ನೀಡಿಯಾದರೂ ಪಡೆದಾರು ಇಂತಹ ಅರ್ಹತಾ ಪತ್ರ,
ಬಿಡರು ಕ್ರಿಕೆಟಿಗರು ಕ್ರೀಡೆ ಜಾಹಿರಾತುಗಳ ರಾಶಿ 'ಅರ್ಥ'

★★★

'ನಿಮ್ಮ ಕನಸಿನ ನಿವೇಶನ ನಿಮ್ಮದಾಗಿಸಿಕೊಳ್ಳುವ ಅವಕಾಶ

- BDA ಜಾಹಿರಾತು

ಅರ್ಕಾವತಿಯ ನಿವೇಶನಕ್ಕೂ ಇಂತಹದೇ ಜಾಹೀರಾತು
ಗೌಡರು ನಿದ್ದೆಯಿಂದೆದ್ದು ಗುಡುಗಲು ಕಸಿವಿಸಿ ಜಾಹೀರಾಯ್ತು.

★★★

'ಲಂಚ ಪಡೆದ ಪೇದೆ ಅಮಾನತು'

- ಸುದ್ದಿ

ಪೇದೆಯುಲಿದನು 'ಆದರೇನಾಯಿತ ಮಾನತು
ಅರಿವೆ ನಾ ಆಚೆ ಬರಲು ನೀಡುವ ಕಿಮ್ಮತ್ತು'

★★★

'ಆಂಧ್ರದಲ್ಲಿ ಕಿರಿಯ ವೈದ್ಯರ ಹರತಾಳ'

- ಸುದ್ದಿ

ತಕ್ಷಣವೇ ಮಾಡಬೇಡಿರಿ ಇವರನ್ನು Arrestಉ
ಯಮರಾಜನಿಗೂ ಸಿಗಲಿ ಒಂದಿನಿತು Restಉ

★★★

'ಸಿದ್ದುಗೆ ಗೌಡರ ಖುದ್ದು ಆಹ್ವಾನ'

- ಸುದ್ದಿ

ಮುಸುಕಿನೊಳಗೆ ಗೌಡರ ಗುದ್ದು

ಮುಂದು ಮಾತ್ರ, ಆಹ್ವಾನದ ಮುದ್ದು, ಮದ್ದು

★★★

'ಚಾಕುವಿನಿಂದ ಇರಿದು ಹಣ ದರೋಡೆಗೆ ಯತ್ನ'

- ಸುದ್ದಿ

ತಾಂತ್ರಿಕತೆ ಹೆಚ್ಚಿರುವ ಈ ದಿನದಿ ತರವಲ್ಲ ಚಾಕು

ದರೋಡೆಗೆ ರಾಜಕೀಯದ ಮಾಂತ್ರಿಕತೆಯೇ ಸಾಕು

★★★

'ಶಾಸ್ತ್ರೀಯ ಸಂಗೀತ ರಕ್ಷಣೆಗೆ Fusion ತಂತ್ರ'

- ಸುದ್ದಿ

Melody ಎಂದರೇನೆಂಬುದರ ಬಗೆಯೇ ಇರುವುದು **Confusion**

ಇಂತಿರಲು ಸರಿಮಾರ್ಗವಾಗಬಹುದೇ ಶಾಸ್ತ್ರೀಯ ಉಳಿಯಲು **Fusion?**

★★★

'ಫಲಕ ಕುಸಿದು ಸಾವು'

- ಸುದ್ದಿ

ಪದ ಕುಸಿಯೆ ನೆಲವಿಹುದು ಮಂಕುತಿಮ್ಮ

ಫಲಕ ಕುಸಿಯೆ ಇನ್ನೂ ಆರಡಿ ಆಳವೋ ತಮ್ಮ

★★★

'ಡ್ಯಾನ್ಸ್ ಬಾರ್‌ನ ಹುಡುಗಿಯರ ಬಂಧನ'

- ಸುದ್ದಿ

ಯಾವ ಮೋಸದ ತುಡುಗ ಕರೆದನೊ **Dance**ಉ ಬಾರಿಗೆ ನಿಮ್ಮನು

ಯಾವ ವಿಧದಾ ಲಂಚ ತೆರುವುದೊ ಬಿಡಿಸಿ ತರಲು ನಿಮ್ಮನು

★★★

ಈಡಿಯಟ್ ಬಾಕ್ಸಿನಲ್ಲಿ ಕನ್ನಡ

ಪ್ರೇಕ್ಷಕರ ಮೇಲೆ ಅಭೂತಪೂರ್ವ ಪ್ರಯೋಗ

- ಗುರು

ಮೆಗಾ ಸೀರಿಯಲ್ಲಿನ ತಯಾರಿಕರಿಗೆ ಯಾವಾಗಲೂ ಒಂದು ರೀತಿಯ ಟೆನ್ಷನ್ ಅಂತೆ, ಇದಕ್ಕೆ ಕಾರಣ ಸೀರಿಯಲ್ಲನ್ನು ''ಎಳೆದು'' ''ಎಳೆದು'' ಎಳೆದುಕೊಂಡು ಹೋಗಲೇ ಬೇಕಾದ ಒತ್ತಡ ಮತ್ತು ಈ ಎಳೆತಗಳಿಗೆ ಅನುಗುಣವಾಗಿ ಪಾತ್ರಗಳನ್ನು ಹಿಗ್ಗಾ ಮುಗ್ಗಾ ಹಿಂಜಾಡಿ ಸುಸ್ತಾಗಿಬಿಡುವುದು. ನೋಡುಗರನ್ನೂ ಸುಸ್ತಾಗಿಬಿಡುವುದು. ಈ ಸುಸ್ತು ಬಹುಶಃ ತೊಂಬತ್ತೈದರಷ್ಟು ಮೆಘಾ ಸೀರಿಯಲ್ಲುಗಳಲ್ಲಿ ಕಂಡುಬರುತ್ತದೆ. ಈ ಮಾತಿಗೆ ನಮಗೆ ತುಂಬಾ ಸುಲಭವಾಗಿ ಸಿಗುವ ಮೊದಲ ಉದಾಹರಣೆ ಎಂದರೆ ಈ ಟೀವಿ ಛಾನಲ್ಲಿನಲ್ಲಿ ಸಂಜೆ ಏಳೂವರೆ ಗಂಟೆಗೆ ಪ್ರಸಾರವಾಗುತ್ತಿರುವ ''ಗುಪ್ತಗಾಮಿನಿ'' ಎಂಬ ''ಕೌಟುಂಬಿಕ'' ಧಾರಾವಾಹಿ! ಇಲ್ಲಿನ ವಿಶೇಷವೆಂದರೆ ಯಾವಾಗ ಬೇಕು ಅಂದರೆ ಆವಾಗ ಒಂದು ಹೊಸಾ ಪಾತ್ರ ಹುಟ್ಟುವುದು!

ಸುಮಾರು ತಿಂಗಳುಗಳಿಂದಲೂ ಈ ಧಾರಾವಾಹಿ ಪ್ರಸಾರವಾಗುತ್ತಿದ್ದು ಮೊದ ಮೊದಲು ಇದನ್ನು ನೋಡುತ್ತಿರಬೇಕಾದರೆ ಒಂದು ಸಂಕೀರ್ಣ ಕಥೆಯನ್ನು ಹೆಣೆಯುತ್ತಿದ್ದಾರೆ ಎಂಬ ಭಾವನೆ ಮೂಡುತ್ತಿತ್ತು. ಆಗ ಕೊಂಚ ಆಕರ್ಷಣೆಯೂ ಇತ್ತು. ಕಥೆ ಮುಂದುವರಿದ ಹಾಗೆ ''ಎಳೆತ''ದ ಪ್ರೋಸೆಸ್ಸೂ ಮುಂದುವರಿದು ಒಂದೊಂದು ಪಾತ್ರವೂ ಗುಪ್ತವಾಗಿ ಗಾಮಿನಿಯಾಗುತ್ತಾ ಮುಂದುವರೆದದೆ. ಕಥೆಯಲ್ಲಿ ಚಿಕ್ಕವನಿದ್ದಾಗಲೇ ಮನೆ ಬಿಟ್ಟು ಓಡಿಹೋದ ತಮ್ಮ ವಾಪಾಸ್ಸಾಗುತ್ತಾನೆ-ದೊಡ್ಡ ಮನುಷ್ಯನಾಗಿ ನಂತರ ಆತನ ಸೇಡನ್ನು ತೀರಿಸಿಕೊಳ್ಳಲು ಶುರು ಹಚ್ಚುತ್ತಾನೆ: ಸೇಡು ಒಂದು ಹಂತ ಮುಟ್ಟಿತೀರಿತು, ಕಥೆಯೂ ತೀರಬಹುದು ಅನಿಸಿದಾಗ ಮತ್ತೊಂದು ಪಾತ್ರ ಧುತ್ತೆಂದು ತಮಿಳು ಸಿನಿಮಾಗಳಲ್ಲಿನ ದೇವರ ಹಾಗೆ ಪ್ರತ್ಯಕ್ಷವಾಗುತ್ತದೆ: ಅಷ್ಟರಲ್ಲಿ ಮನೆಬಿಟ್ಟು ಓಡಿ ಹೋದವನು ಪ್ರೇಮಪಾಶದಲ್ಲಿ ಸಿಲುಕಿ ಇನ್ನೇನು ತಾಳಿ ಕಟ್ಟಬೇಕು ಎನ್ನುವಾಗಲೇ ಹೊಸಾ ಪಾತ್ರ ಆಗಮಿಸುತ್ತದೆ. ಹೊಸ ಪಾತ್ರಕ್ಕೊಂದು ಹೆಣ್ಣು ಮಗಳು ಮತ್ತು ಅವಳು ಸೇಡಿಗನ ಪ್ರೇಮಕ್ಕಾಗಿ ಹಾತೊರೆಯುತ್ತಿರುವಳು! ಈ ಮಧ್ಯೆ ಓಡಿಹೋದವನು ಪ್ರೇಮಿಸಿದ್ದ ಹುಡುಗನಿಗೆ ಮತ್ತೊಂದು ಒನ್ ವೇ ಲೋವರು ಹುಟ್ಟುತ್ತಾನೆ! ಸರೀನಾ, ಕತೆಯ ಮಧ್ಯೆ ಹಲವಾರು ಪಾತ್ರಗಳು ಹೊಸಾ ಬಿಸಿನೆಸ್ಸು ಶುರುಮಾಡುತ್ತವೆ, ಕೋಟಿ ಕೋಟಿಗಳ ಮಾತು ಸಲೀಸಾಗಿ ಹದಿನೆಂಟು ಇಪ್ಪತ್ತು ವಯಸ್ಸಿನ ಹುಡುಗಿ ಹುಡುಗರ ಬಾಯಿಸಲ್ಲಿ ಚ್ಯೂಯಿಂಗ್ ಗಮ್ಮಿನ ಥರಹ ಉರುಳಾಡಿಬಿಡುತ್ತವೆ....

ನಾಟಕದ ರಂಗದ ಮೇಲೆ ಹೆಸರು ಮಾಡಿರುವ ಜನ ಈ ಸೀರಿಯಲ್ಲಿನಲ್ಲಿ ಪಾತ್ರ ಮಾಡಿದ್ದಾರೆ. ಒಬ್ಬ ನಟನಂತೂ ಯವಾಗಲೂ ಮೂತಿ ಕಣ್ಣು ಮೈಯಿ ಕೈಯಿ ಎಲ್ಲವನ್ನೂ ಸೊಟ್ಟಗೆ ಮಾಡಿಕೊಂಡು ತನಗಿಂತಲೂ ಎರಡುಪಟ್ಟು ಡುಮ್ಮಗಿರುವ ಹೆಂಡತಿಯನ್ನು

ಕಿಥಾಯಿಸುತ್ತಾ ದಾಂಪತ್ಯ ಸುಖವನ್ನು ನಮಗೆ ಉಣಬಡಿಸುತ್ತಾನೆ! ಮತ್ತೊಂದು ಕೀ ಪಾತ್ರವಂತೂ ಹೇಗೆ ಸೊರಗಿ ಹೋಗಿದೆ ಅಂದರೆ ಪಾಪ ಅನಿಸುತ್ತೆ. ಒಂದು ಪಾತ್ರ ಅಜ್ಜಿ ರೋಲನ್ನ ಮಾಡುತ್ತೆ - ಯಾವ ಮನೇಲಿ ಅಜ್ಜಿ ಹೀಗಿರುತ್ತೋ ತಿಳೀದು... ಅಕ್ಕತಂಗಿಯರ, ಭಾಮೈದುನಂದಿರ, ಎರಡು ಗಂಡು ಲೋವರುಗಳ, ಎರಡು ಹೆಣ್ಣು ಲೋವರುಗಳ, ಮೂರು ಒನ್‌ವೇ ಲೋವುಗಳ, ಅಪ್ಪ ಯಾರು ಅಂತ ಗೊತ್ತಿಲ್ಲದಿರುವ ಹೆಣ್ಣು ಹುಡುಗಿಯ... ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದಾದಂಥಹ ಕೌಟುಂಬಿಕ ಕಥೆಯನ್ನು ಈ ಧಾರಾವಾಹಿ ಒಳಗೊಂಡಿದೆ! ಕೆಲವು. ''ಪ್ರಖ್ಯಾತ'' ನಟರನ್ನು ನೋಡಿದಾಗ ಅಯ್ಯೋ ಪಾಪಾ ಅನಿಸುತ್ತದೆ! ''ಗುಪ್ತಗಾಮಿನಿ''ಯನ್ನು ಮೊನ್ನೆ ನೋಡುತ್ತಾ ಕೂತಿದ್ದ ಬಂಧುಗಳೊಬ್ಬರು ಹೇಳಿದ್ದು ''ಈ ಸೀರಿಯಲ್ಲನ್ನ ನೋಡುತ್ತಾ ಇದ್ದರೆ ಯಾರು ಬೇಕಾದರೂ ನಟಿಸಬಹುದು, ಯಾರು ಬೇಕಾದರೂ ಕಥೆಯನ್ನು ಸಸ್ಪೆನ್ಸ್‌ನಲ್ಲಿ ಇಡೋಕ್ಕೆ ಹೆಣೀಬಹುದು, ಏನು ಬೇಕಾದರೂ ಆಗಬಹುದು...''

ಅಂದಹಾಗೆ ಈ ಸೀರಿಯಲ್ಲಿಗೆ ಪ್ರತೀಸಲವೂ ಅದ್ಯಾವುದೋ ಪ್ರಶಸ್ತಿಗಳು ಹೋಲ್ ಸೇಲಿನಲ್ಲಿ ಸಿಗುತ್ತವಂತೆ. ಹೀಗೆ ಸಿಗುವ ಪ್ರಶಸ್ತಿಗಳು ಪ್ರೇಕ್ಷಕರ ತಾಳ್ಮೆಯನ್ನೂ ಪರಿಗಣಿಸಲೇಬೇಕು ಅಂತ ನಿಮಗೆ ಅನಿಸಿದ್ದರೆ ನಾವೂ ಹೌದು ಅಂತ ತಲೆಯಾಡಿಸುತ್ತೇವೆ! ಪ್ರೇಕ್ಷಕರ ಮೇಲೆ ಅಭೂತಪೂರ್ವ ಪ್ರಯೋಗವನ್ನು ಸೀರಿಯಲ್ಲು ಯಶಸ್ವಿಯಾಗಿ ನಡೆಸುತ್ತಿದೆ!

ಮನವಿ

ಜನಪ್ರಿಯ ನಗೆಗಾರ ದಿವಂಗತ ರಾಶಿಯವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಕನ್ನಡದ ಜನಪ್ರಿಯ ಹಾಸ್ಯಪತ್ರಿಕೆ ಕೊರವಂಜಿಯ ಎಲ್ಲ ಸಂಪುಟಗಳನ್ನು ಸಂಗ್ರಹಿಸಿಡುವ ಕಾರ್ಯ ಈಗ ನಡೆಯುತ್ತಿದೆ. 1950 ಏಪ್ರಿಲ್‌ನಿಂದ 1951 ಮಾರ್ಚ್ ವರೆಗಿನ ಕೊರವಂಜಿ ಪತ್ರಿಕೆಗಳು (ಒಟ್ಟು 12) ನಮ್ಮಲ್ಲಿ ಲಭ್ಯವಿಲ್ಲ. ಓದುಗ ಮಿತ್ರರ ಬಳಿ ಅದು ಇದ್ದಲ್ಲಿ ನಮಗೆ ಕಳಿಸಿಕೊಡಬೇಕೆಂದು ವಿನಂತಿ. ನಾವು ಅದರದೊಂದು ಪ್ರತಿ ಮಾಡಿಕೊಂಡು ಅದನ್ನು ಹಿಂದಿರುಗಿಸುತ್ತೇವೆ. ಸಂಚಿಕೆಗಳು ಒಟ್ಟಾಗಿಯಾದರೂ ಸರಿ ಬಿಡಿ ಬಿಡಿಯಾಗಿಯಾದರೂ ಸರಿ ಕಳಿಸಿಕೊಡಬಹುದು.

ಬೇಲೂರು ರಾಮಮೂರ್ತಿ
ಉಪ ಸಂಪಾದಕರು ಅಪರಂಜಿ
'ಸುಕೇಶವ' 26, 2ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ
ಬಿಟಿಎಂ 1ನೇ ಹಂತ, ಬೆಂಗಳೂರು - 560 068
ಫೋನ್ : 26688488 ಮೊಬೈಲ್ : 98860 61400
ಈಮೈಲ್ : br_murthy@vsnl.net

ಬದುಕಿಕೊಂಡ ಪ್ರಾಣಿಗಳು

- ಪರಮೇಶ್ವರ ಪುರಾಣಿಕ

ಮೊದಲು ಮನೆಯೆಂದು ಅನ್ನಿಸಿಕೊಳ್ಳುತ್ತಿದ್ದದ್ದು ಈಗ ವಾಡೆಯೆಂದು ಅನ್ನಿಸಿಕೊಳ್ಳುತ್ತದೆ. ವಾಡೆಯ ಹೆಬ್ಬಾಗಿಲು ಮತ್ತು ಅದರ ಸುತ್ತಮುತ್ತಲಿನ ಪಟಾಂಗಣ ಚೆನ್ನಾಗಿವೆ. ಪಟಾಂಗಣಕ್ಕೆ ಹೊಂದಿಕೊಂಡಂತಿರುವ ಆರೇಳು ಕೋಣೆಗಳು ವಾಸಿಸಲು ಯೋಗ್ಯವಾಗಿವೆ. ಉಳಿದ ವಾಡೆಯ ಭಾಗ ಸಂಪೂರ್ಣ ಬಿದ್ದುಹೋಗಿದೆ. ಈ ವಾಡೆ ದೇಸಾಯಿಯವರ ಮಾಲೀಕತ್ವದ ವಾಡೆ. ಇನ್ನೂ ದೇಸಾಯಿಯವರ ವಂಶಸ್ಥರು ಅಲ್ಲಿ ವಾಸಿಸುತ್ತಿದ್ದಾರೆ. ಆ ವಾಡೆಯಲ್ಲಿ ವಾಸಿಸಲು ಬಹಳ ಧೈರ್ಯಬೇಕು. ಆ ವಾಡೆಯಲ್ಲಿ ಮಾನವರ ಕೂಡ ಅನೇಕ ಪ್ರಾಣಿಗಳೂ ವಾಸಿಸುತ್ತವೆ. ಪ್ರಾಣಿಗಳೆಂದ ಕೂಡಲೆ ಆಕಳುಗಳು, ಎತ್ತುಗಳು ಎಮ್ಮೆ ಮುಂತಾದವುಗಳು ಎಂದು ವಾದಿಸುವುದು ತಪ್ಪೆನಿಸುತ್ತದೆ. ಈಗ ಅಲ್ಲಿರುವ ದೇಸಾಯಿ ವಂಶಸ್ಥರಿಗೆ ಅವನ್ನು ಸಾಕುವ ಭಾಗ್ಯವಿಲ್ಲ ಯಾಕೆಂದರೆ ಅವರದೇ ಆದ ಒಂದು ತುಂಡು ಭೂಮಿಯಿಲ್ಲ, ದನಕರುಗಳನ್ನು ಸಾಕುವ ಆರ್ಥಿಕ ಬಲವಿಲ್ಲ. ಈಗ ಅವರ ಕೂಡ ವಾಸಿಸುವ ಪ್ರಾಣಿಗಳೆಂದರೆ ಹಾವು ಚೋಳ ಜೊಂಡಿಂಗ (ಜಿರಲೆ) ಮುಂತಾದ ಅನೇಕ ತರಹದ ಹುಳ ಹುಪ್ಪಟೆಗಳು. ಯಾಕೋ ಏನೋ ಈ ವಿಷಕಾರಿ ಪ್ರಾಣಿಗಳು ವಾಡೆಯಲ್ಲಿ ವಾಸಿಸುತ್ತಿರುವ ದೇಸಾಯಿ ವಂಶಸ್ಥರನ್ನು ಕಚ್ಚಿದ ಉದಾಹರಣೆಗಳಿಲ್ಲ. ತಮ್ಮ ಮಾಲಿಕರಿಗೆ ಯಾರಾದರೂ ಎರಡು ಬಗೆಯುತ್ತಾರೇನು! ಆ ಮನೆಗೆ ಇರಲು ಯಾರಾದರೂ ಬಂದರೆ, ಹಗಲು ಹೇಗೋ ಕಾಲ ಕಳೆಯಬಹುದು ಆದರೆ ಸಂಪೂರ್ಣ ರಾತ್ರಿ ಕಳೆದವರು ಬಹಳ ವಿರಳ. ಮನೆಯ ವಿವರವಾದ ವರ್ಣನೆಯನ್ನು ಆ ಮೇಲೆ ನೋಡೋಣ. ಇಂಥ ಮನೆಗೆ 'ಭಾನಾಮತಿ' ಯ ಕಾಟ ಪ್ರಾರಂಭವಾಗಿದೆ ಎಂಬ ಮಾತು ಒಂದು ದಿನ ಮುಂಜಾನೆ ಕಾಡ್ಗಿಚ್ಚಿನಂತೆ ಹಬ್ಬಿಬಿಟ್ಟಿತು. ಎಂದೂ ದೇಸಾಯಿ ವಾಡೆಯ ಹತ್ತಿರ ಸುಳಿಯದ ಜನ ಓಡಿ ಬಂತು. ದೂರವೇ ನಿಂತು ವಾಡೆಯನ್ನು ನೋಡುತ್ತಿತ್ತು. ಸಮೀಪ ಹೋದರೆ ಭಾನಾಮತಿ ತಮ್ಮನ್ನು ಕಾಡಿತೆಂಬ ಭಯ, ಇದು ಭಾನಾಮತಿಯಲ್ಲ ಯಾರೋ ಮಾಡಿದ 'ಮಾಟ'ವೆಂದು ಕೆಲವರು ವಾದಿಸಿದರೆ ಮತ್ತೆ ಕೆಲವರು ಇದು 'ದೆವ್ವದ ಕಾಟ'ವೆಂದರು. ಜೋಷಿ ಭಟ್ಟರು ತಮ್ಮನ್ನು ಯಾರೂ ಕೇಳದಿದ್ದರೂ ತಾವೇ ಪಂಚಾಂಗ ತೆಗೆದು ಗುಣಾಕಾರ ಭಾಗಾಕಾರ ಮಾಡಿ ಏನೇನೋ ಲೆಕ್ಕ ಮಾಡಿ ಇದು ಭಾನಾಮತಿ ಮಾಟ ಅಥವಾ ಕಾಟವಲ್ಲವೆಂದು ಘೋಷಿಸಿದರು. ಜನ ಅವರ ಮಾತನ್ನು ನಂಬಲು ಸಿದ್ಧರಿರಲಿಲ್ಲ. ಇದನ್ನು ಹೇಳಲು ಭಟ್ಟರು ಮಲೆಯಾಳಿ ಮಾಂತ್ರಿಕರೇ? ಎಂದು ಕೇಳಿದರು. ಸುದ್ದಿ ತಿಳಿದ ಕೆಲವೇ

ಘಂಟೆಗಳಲ್ಲಿ ಕೆಲವು ಬುದ್ಧಿ ಜೀವಿಗಳು ವಿಜ್ಞಾನಿಗಳು ಸತ್ಯ ಶೋಧನೆ ಸಂಘಟನೆಯ ಸದಸ್ಯರು ಧಾವಿಸಿದರು. ಎಂದೂ ಹೋಗಿರದ ದೇಸಾಯಿ ವಾಡೆಗೆ ಯಾಕೋ ಏನೋ ಅವರೂ ಹೋಗಲಿಲ್ಲ. ಕೇಳಿದರೆ ವಾಡೆ ಶಿಥಿಲವಾಗಿದೆ ಎಂಬ ಕಾರಣ ಕೊಟ್ಟು ದೇಸಾಯಿ ವಂಶಸ್ಥರ ಹಿರಿಯರನ್ನು ತಾವು ಕುಳಿತಲ್ಲಿಯೇ ಕರೆ ಕಳಿಸಿದರು. ಹಿರಿಯ ದೇಸಾಯಿ ಎಪ್ಪತ್ತು ವರುಷದ ಮುದುಕ ಗೂಣಗುತ್ತಲೇ ತನ್ನ ಮೊಮ್ಮಗನ ಹೆಗಲ ಮೇಲೆ ಕೈ ಹಾಕಿ ಸಾವಕಾಶವಾಗಿ ನಡೆದು ಬಂದು ಪಟ್ಟಣದಿಂದ ಬಂದ ಸದಸ್ಯರ ಮುಂದೆ ಕುಳಿತರು. ದೇಸಾಯಿ ಎಂದರೆ ದೇಸಾಯಿ, ಎಪ್ಪತ್ತು ವರುಷವಾದರೂ ದೇಸಾಯಿತನದ ಸೊಗಡು ಹೋಗಿರಲಿಲ್ಲ. ತಲೆಗೆ ಪಟಗಾ ಸುತ್ತಿಕೊಂಡು ಧೋತರ ಮೇಲೆ ಬಿಳಿ ಜುಬ್ಬಾ ಧರಿಸಿ ರಾಜನಾಂಗ ಕುಳಿತಿದ್ರು. 'ಹೇಳ್ರಿ ಯಾಕ ನನ್ನ ಕರೆಸಿದ್ರಿ?' ದೇಸಾಯಿ ಗತ್ತಿನಲ್ಲಿ ಕೇಳಿದರು.

'ನಿಮ್ಮೂರ ಮಂದಿ ಏನೋ ಭಾನಾಮತಿ, ಮಾಟ ದೆವ್ವದ ಕಾಟ ಅಂತ ಮಾತಾಡುದನ್ನ ತಿಳಿದು ನಾವು ಖರೆ ಏನು ಅಂತ ತಿಳಕೊಳ್ಳಲಿಕ್ಕೆ ಬಂದಿವಿ'

'ನನ್ನ ಮನೆಮಾತು ಮತ್ತೊಬ್ಬರು ಮಾತಾಡಿದ್ದು ಕೇಳಿ ಖರೆ ಅಂತ ತಿಳಿಕೊಂಡು ಓಡಿ ಬಂದಿರಿ ಅಂದಂಗಾತು.'

'ಹೌದು ನೀವು ಹೇಳಿದ್ದು ಖರೆ. ಮಂದಿ ಮಾತು ನೀವು ಕೇಳಿರಬೇಕಲ್ಲ! ಅದೆಲ್ಲ ಖರೆ ಏನ್ರಿ?'

'ಮಂದ್ರೇನ್ರಿ, ಏನೇನಾರ ಮಾತಾಡತಾರ. ಅವರಿಗೇನು ಗೊತ್ತಾಗ್ತದ. ಭಾನಾಮತಿ ಇಲ್ಲ, ಮಂತ್ರಮಾಟಿಲ್ಲ ಭೂತ ದೆವ್ವ ಅನ್ನುದೆಲ್ಲ ಸುಳ್ಳ ಐತಿ. ಖರೆ ಹೇಳಬೇಕಂದ್ರ ನಮ್ಮ ಮನ್ಯಾಗ ಏನೋ ಚಮತ್ಕಾರ ನಡದದ.'

'ಚಮತ್ಕಾರ ಸ್ವಲ್ಪ ಬಿಡಿಸಿ ಹೇಳ್ರಿ'

ಬಾಯಾಗಿನ ತಂಬಾಕ ಉಗುಳಿ ನೀರ ತರಿಸಿ ಬಾಯಿ ತೊಳಕೊಂಡು ನೀರು ಕುಡಿದು ಮೀಸೆ ಒರಸಗೊಂಡು ದೇಸಾಯರು ತಮ್ಮ ಮಾತು ಪ್ರಾರಂಭಿಸಿದರು. 'ಚಮತ್ಕಾರ ಏನಂತಂದ್ರ, ಮೊನ್ನೆ ಅಮಾಸಿ ದಿವಸ ಪೂಜಾ ಮಾಡಲಿಕ್ಕೆ ಕುಳಿತಿದ್ದೆ. ಒಮ್ಮೆಗೆ ಮೇಲ ಮುದ್ದಿವಳಗ ಧಡಪಡ ಸಪ್ಪಳ ಆತು ಬುದು ಬುದು ಮೇಲಮುದ್ದಿ ಮಣ್ಣು ಬಿತ್ತು ಮಣ್ಣಿನ ಜೋಡಿ ಇಲಿ ಸುದ್ದಾ ಬಿದ್ದವು. ಬಿದ್ದ ಇಲಿ ಎದ್ದು ಮನಿಬಿಟ್ಟು ಹೊರಗ ಓಡಿ ಹೋದುರಿ. ಹಿಂಗ ಬಹುತೇಕ ಎಲ್ಲಾ ಇಲಿ ಹೆಗ್ಗಣ ಮನಿಬಿಟ್ಟು ಹೋದುರಿ. ಮರುದಿವಸ ನಾಲ್ಕೈದು ಹಾವು ಮನೆಯಿಂದ ಹೊರಬಿದ್ದು ಮನ್ಯಾಗ ಇದ್ರ ಘಾತ ಆಗತದ ಅನ್ನು ಹಂಗ ಹೊಂಟು ಹೋದುರಿ. ನಾವೇನು ಔಷಧ ಸಿಂಪಡಿಸಿಲ್ಲ ಮಂತ್ರಾ ಹಾಕಿಸಿಲ್ಲ. ಅದರ ಮರುದಿವಸ ಸಾವಿರಾರು ಜೊಂಡಿಂಗ (ಜಿರಲೆ) ಮತ್ತ ಬ್ಯಾರೆ ಬ್ಯಾರೆ ಹುಳ ಹುಪ್ಪಟೆ ಒಂದ ಸಾಲಿನ್ಯಾಗ

ಹೊಂಟು ಹೋದುರಿ ಬಿಳಿ ಜೊಂಡಿಂಗ ಅಂದರ ಮನಿ ಲಕ್ಷ್ಮಿ ಅವೂ ಸಹಿತ ಹೋದುರಿ. ಅಗಾ... ಅಲ್ಲಿ ನೋಡ್ರಿ... ಎಲ್ಲರೂ ಹೆಬ್ಬಾಗಿಲ ಕಡೆಗೆ ನೋಡಿದರು. ಚೋಳಗಳ ಸಾಲೆ ಮನೆಯಿಂದ ಹೊರಬಿದ್ದು ಹೊರಟಿದ್ದವು. 'ಈಗ ನೋಡಿದ್ರಲ್ಲಾ ಹಿಂಗ ಎಲ್ಲಾ ಪ್ರಾಣಿಗಳು ಹೊಂಟದ್ವು, ಇದು ಚಮತ್ಕಾರವಲ್ಲದ ಮತ್ತೇನ್ರಿ?'

ಇದು ಚಮತ್ಕಾರವೇ ಆಗಿತ್ತು. ಈ ವಿಷಯ ಸೋಜಿಗವಾಗಿದ್ದರೂ ಸತ್ಯವಾಗಿತ್ತು. ಈ ವಿಷಯವನ್ನು ವಿಶ್ಲೇಷಿಸಲು ಬುದ್ಧಿ ಜೀವಿಗಳಿಗೆ ಅಥವಾ ಸತ್ಯಶೋಧನೆ ಸಂಘದ ಸದಸ್ಯರಿಗೆ ಸಾಧ್ಯವಿರಲಿಲ್ಲ ಏನಾದರೂ ವಿಶ್ಲೇಷಿಸುವುದಿದ್ದರೆ ವಿಜ್ಞಾನಿಗಳಿಗೆ ಮಾತ್ರ ಸಾಧ್ಯವಿತ್ತು. ವಾಡೆಯಂಥ ವಾಸಿಸಲು ಯೋಗ್ಯವಾದ ಸ್ಥಳವಿದ್ದೂ, ಇಷ್ಟು ದಿವಸ ವಾಸ ಮಾಡಿಯೂ ಈ ಪ್ರಾಣಿಗಳು, ಹುಳ ಹುಪ್ಪಡಿಗಳು ಹೊರಬಿದ್ದು ಹೋಗಿದ್ದು ಯಾಕೆ? ವಿಜ್ಞಾನಿಗೂ ಹೊಳೆಯಲಿಲ್ಲ. ಊರ ಜನರಿಗೂ ಹೊಳೆದಿರಲಿಲ್ಲ ಅಂತೆಯೇ ಭಾನಾಮತಿ ಅಂದ್ರು ಮಾಟ, ದೆವ್ವದ ಕಾಟ ಅಂದ್ರು. ವಿಜ್ಞಾನಿಗಳು ಹೀಗೆ ಅನಬಹುದೇ!

'ದೇಸಾಯಿವರ ನೀವೇನಂತೀರಿ' ಬಂದವರು ಕೇಳಿದರು.

'ನಾ ಏನ ಅನ್ನುದದ. ಅವಕ್ಕ ನಮ್ಮ ಮನ್ಯಾಗ ಇರುದು ಬ್ಯಾಡಾಗಿತ್ತು ಹೋಗ್ಯಾವಾತು. ಇನ್ನಮ್ಯಾಲೆ ಅಂಜಿಕೆ ಇಲ್ಲದ ಇರತೇವಿ ಬಿಡ್ರಿ,' ಇದು ಕೇಳಿದ ಪ್ರಶ್ನೆಗೆ ಉತ್ತರವಾಗಿರಲಿಲ್ಲ. ವಿಜ್ಞಾನಿ ಮನಸ್ಸಿನ್ಯಾಗ ತಾಕಲಾಟ ಸುರು ಆಗಿತ್ತು ವಿಚಾರ ಮಾಡಿ ಮಾಡಿ 'ನನಗೆ ಏನು ಅನಸ್ತದಂದ್ರ...' ವಿಜ್ಞಾನಿಗಳು ಹೇಳತೊಡಗಿದರು. 'ಈ ಎಲ್ಲಾ ಪ್ರಾಣಿಗಳಿಗೆ ಮುಂದ ಆಗೂ ಗಂಡಾಂತರದ ಸೂಚನೆ ಮೊದಲೇ ಸಿಗ್ತದ. ನಮ್ಮ ಪ್ರಕೃತಿ ತನ್ನ ಪ್ರಾಣಿಗಳಿಗೆ ಕೊಟ್ಟ ವಿಶೇಷ ಶಕ್ತಿ. ಆದಕ ಈ ಪ್ರಾಣಿಗಳಿಗೆ ತಮ್ಮ ಜೀವಕ್ಕ ಕುತ್ತು ಬರೂ ಸೂಚನೆ ಸಿಕ್ಕಿರಬೇಕು. ಅದಕ ಓಡಿ ಹೋಗಿರಬೇಕು'

'ಏನ್ರಿ ಹಿಂಗ ಅಂದ್ರ? ನನಗೆ ಇದು ಬರೊಬ್ಬರಿ ಅನಸವಲ್ಲದು' ದೇಸಾಯಿಯವರು ಹೇಳುತ್ತಿರುವಾಗ ಅವರ ಮೊಮ್ಮಗ ಮಹಾದೇವ ಅವರ ಕಾಲುಮುಗಿದ.

'ಸಿಂಗಾಪೂರದಿಂದ ಯಾವಾಗ ಬಂದ್ಯೋ ಮಹಾದೇವ?'

'ನಿನ್ನೆ ಮುಂಬೈಗೆ ಬಂದೆ ಹಂಗ ಸೀದಾ ಇಲ್ಲಿಗೆ ಬಂದೆ. ಅಜ್ಜಾ ಇವರು (ತಮ್ಮ ಸ್ನೇಹಿತನ ಕಡೆಗೆ ನೋಡಿ) ನನ್ನ ಗೆಳೆಯ ಚಿಂಗ ಚಾಂಗ ಚೂ ಚೀನಾ ದೇಶದವನು ಕೆಲವು ದಿವಸ ನಮ್ಮ ಮನ್ಯಾಗ ಇರತಾನ' ಮಹಾದೇವ ಮಾತು ಮುಗಿಸಿದ. ವಿಜ್ಞಾನಿಗೆ ಆ ಪ್ರಾಣಿಗಳಿಗೆಲ್ಲ ಬಂದ ಗಂಡಾಂತರ ಗೊತ್ತಾಯ್ತು ಅವು ಓಡಿ ಹೋಗಿ ತಮ್ಮ ಜೀವ ಉಳಿಸಿಕೊಂಡಿದ್ದವು.

★★★

Mailing Date 5th of every month
Reg. No.: CPMG/KA/BGW-544/2003-05

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR